ಶ್ರೀ ವಾಟಾಳ್ ನಾಗರಾಜ್.—ಕಾರ್ಪೊರೇಷನ್ ಮೀಟಿಂಗ್‌ನ ಪ್ರೊಸೀಡಿಂಗ್ಸ್ ತರಿಸಿ. ಆ ಮೀಟಿಂಗ್‌ನಲ್ಲಿ ಈ ಸಭೆ ಸದಸ್ಯರಿಗೆ ಅಗೌರವ ತರುವಂಥ ಮಾತುಗಳನ್ನಾಡಿದ್ದಾರೆ. ಆದುದರಿಂದ ಅಲ್ಲಿರುವ ಟೇಪ್ ರಿಕಾರ್ಡ್ಸ್‌ನ್ನು ತರಿಸಿ ನೋಡುತ್ತೇವೆ ಎಂದು ಆಶ್ವಾಸನೆ ಕೊಡುತ್ತೀರಾ ?

ಅಧ್ಯಕ್ಷರು.—ಅದನ್ನು ತರಿಸುವುದಕ್ಕೆ ಅವಕಾಶ ಬೇಕು. ತಾವು ಸ್ವಲ್ಪ ಅವಕಾಶ ಕೊಡಿ.

ಶ್ರೀ ವಾಟಾಳ್ ನಾಗರಾಜ್.—ನಾನು ಹೇಳುತ್ತಾ ಇರುವುದು ಏನೆಂದರೆ ಇನ್ನೊಂದು ವಿಷಯ, ಅಲ್ಲಿ ಟೇಪ್ ರಿಕಾರ್ಡ್ಸ್ ಮತ್ತು ಮಿನಿಟ್‌ಬುಕ್ಸ್ ಇವನ್ನು ಟ್ಯಾಂಪರ್ ಮಾಡುವ ಮಿಷನರಿ ಇದೆ. ಅಲ್ಲಿ ವಿಷಯ ತಮಗೆ ಗೊತ್ತಿಲ್ಲ. ತಮ್ಮ ಕಣ್ಣನ್ನೂ ಕೂಡ ಮುಚ್ಚಿಸಿ ಕೆಲಸ ಮಾಡತಕ್ಕಂಥ ಮೆಷನರಿ ಕಾರ್ಪೊರೇಷನ್ ಆಫೀಸಿನಲ್ಲಿ ಇದೆ. ಆದುದರಿಂದ ಅಲ್ಲಿ ಪ್ರೊಸೀಡಿಂಗ್ಸ್‌ನ್ನು ತರಿಸುತ್ತೇನೆ ಎಂದು ಏನು ಹೇಳಿದರೋ ಅದನ್ನು ಜೋಪಾನವಾಗಿ ತರಿಸಿ.

ಅಧ್ಯಕ್ಷರು.—ಜೋಪಾನವಾಗಿ ತರಿಸುತ್ತೇನೆ.

ಶ್ರೀ ಶರಣಪ್ಪ.—ಅಧ್ಯಕ್ಷರೇ, ನಾನು ಒಂದು ಕಾಲ್ ಅಟೆನ್‌ಷನ್ ಮೋಷನ್ ಕೊಟ್ಟಿದ್ದೆ. ಅದನ್ನು ಯಾವಾಗ ತೆಗೆದುಕೊಳ್ಳುತ್ತೀರಿ.

ಅಧ್ಯಕ್ಷರು.—ದಿನಕ್ಕೊಂದು ಕಾಲ್ ಅಟೆನ್‌ಷನ್ ತೆಗೆದುಕೊಳ್ಳುತ್ತೇವೆ. ನಿಮ್ಮದೂ ಕೂಡ ಸರದಿ ಪ್ರಕಾರ ತೆಗೆದುಕೊಳ್ಳುತ್ತೇವೆ.

Revised Budget Estimates for 1972-73—Demand for Grants

(Demand Nos. 17 and 37)

ಅಧ್ಯಕ್ಷರು.—ಮಾನ್ಯ ಸಚಿವರಿಗೆ ತಮ್ಮ ಬೇಡಿಕೆಗಳ ಮೇಲೆ ರಿಪ್ಲೈ ಮಾಡುವುದಕ್ಕೋಸ್ಕರ ಎಷ್ಟು ಕಾಲಾವಕಾಶ ಬೇಕಾಗುತ್ತದೆ ?

ಶ್ರೀ ಎ. ಆರ್. ಬದರಿನಾರಾಯಣ್.—ನನಗೆ ಅರ್ಧ ಗಂಟೆ ಬೇಕಾಗುತ್ತದೆ.

ಅಧ್ಯಕ್ಷರು.—ಈಗ ಚರ್ಚೆ ಮುಂದುವರಿಯುತ್ತದೆ. ಮಾನ್ಯ ಸದಸ್ಯರು 12 ಗಂಟೆವರೆಗೂ ಚರ್ಚೆ ಮಾಡಬಹುದು. ಒಂದು ಗಂಟೆಗೆ ಡಿಮ್ಯಾಂಡ್ ಓಟಿಗೆ ಹಾಕಬೇಕು. ಆದುದರಿಂದ ಪ್ರತಿಯೊಬ್ಬ ಸದಸ್ಯರೂ ಕೂಡ ಆದಷ್ಟು ಬೇಗ ಅವರವರ ಭಾಷಣವನ್ನು ಮುಗಿಸಬೇಕು.

† ಶ್ರೀ ಎನ್. ಬಸವಯ್ಯ (ಚಿಕ್ಕನಾಯಕನಹಳ್ಳಿ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ಒಂದು ವಿದ್ಯಾ ಇಲಾಖೆಗೆ ತಮಗೆ ಬೇಕಾಗಿರುವ ಒಂದು ಆಯವ್ಯಯ ಡಿಮ್ಯಾಂಡನ್ನು ಏನು ಕೇಳಿದ್ದೀರೋ ಅದಕ್ಕೆ ಸಭೆ ಅನುಮತಿ ಕೊಡಬೇಕು. ಆದರೆ ನಾವು ವಿರೋಧಪಕ್ಷದವರಾದ್ದರಿಂದ ನಾವೂ ಕೂಡ ಅನುಮತಿ ಕೊಡಬೇಕಾಗುತ್ತದೆ ಅನ್ನುವುದೂ ನಿಜ. ಆದರೆ ಈ ವಿದ್ಯಾಕ್ಷೇತ್ರ ಒಂದು ಪವಿತ್ರವಾದ ಕ್ಷೇತ್ರ. ಈ ಪವಿತ್ರತೆ ಈಗ ಬಹಳ ಕಡಿಮೆಯಾಗಿದೆ. ಈ ಪವಿತ್ರತೆಯನ್ನು ಉಳಿಸಿಕೊಂಡು ಬರತಕ್ಕಂಥಾದ್ದು ಸರ್ಕಾರದ ಮತ್ತು ನಮ್ಮೆಲ್ಲರ ಆದ್ಯ ಕರ್ತವ್ಯ. ಈ ಪವಿತ್ರತೆಯನ್ನು ಕಾಪಾಡಿಕೊಂಡು ಬರುವುದಕ್ಕೆ ಎಲ್ಲರೂ ಸಹಕರಿಸಬೇಕು. ನಾನು ಪ್ರಾಮುಖ್ಯವಾಗಿ ಈ ವಿದ್ಯಾಭ್ಯಾಸದ ಬಗ್ಗೆ ಎರಡು ಮಾತುಗಳನ್ನಾಡಲು ಇಚ್ಛೆ ಪಡುತ್ತೇನೆ.

ಮೊದಲನೆಯದಾಗಿ ಈ ಡಿಪಾರ್ಟ್‌ಮೆಂಟ್ ಬೆಳೆದಿದೆಯೇ ವಿನಃ ಕೆಲಸಗಳು ಏನೂ ಆಗುತ್ತಾ ಇಲ್ಲ. ಯಾವರೀತಿ ಬೆಳೆದಿದೆ ಎಂದರೆ ಈ ಇಲಾಖೆಯಲ್ಲಿ ಡಿ.ಪಿ.ಐ., ಜಾಯಿಂಟ್ ಡಿ.ಪಿ.ಐ., ಎ.ಇ.ಒ. ಮತ್ತು ತನಿಖಾಧಿಕಾರಿಗಳು ಮತ್ತು ಅನೇಕ ಇನ್‌ಸ್ಪೆಕ್ಟರ್ಸ್‌ಗಳು ಈ ರೀತಿ ಉಪಾಧ್ಯಾಯರ ಶಾಲೆಗಿಂತ ಹೆಚ್ಚು ಅಧಿಕಾರಿಗಳ ಸಂಖ್ಯೆ ಈ ವಿದ್ಯಾ ಇಲಾಖೆಯಲ್ಲಿ ಬೆಳೆದಿದೆ. ಈ ವಿದ್ಯಾಭ್ಯಾಸದ ಕಾರ್ಯಕ್ಷೇತ್ರದಲ್ಲಿ ದೇಶಕ್ಕೆ ಏನು ಒಂದು ಕಾರ್ಯ ಸಾಧಿಸಬೇಕಾಗಿತ್ತೋ ಅಂಥಾದ್ದು ಸಾಧಿಸಿಲ್ಲ. ಈ ಇಲಾಖೆಯನ್ನು ಬರೀ ಅಧಿಕಾರಿಗಳನ್ನು ನೇಮಿಸಿ ಎಸ್ಟಾಬ್ಲಿಷ್‌ಮೆಂಟ್‌ಗೆ ಹೆಚ್ಚು ಹಣ ವ್ಯಯ ಮಾಡುತ್ತಿದ್ದಾರೆಯೇ ಹೊರತು ಮಕ್ಕಳಿಗೆ ನಿಜವಾದ ವಿದ್ಯಾ ಸೌಕರ್ಯ ಒದಗಿಸಿಲ್ಲ ಎಂದು ಹೇಳಬೇಕಾಗಿದೆ. ಆದುದರಿಂದ ದಯಮಾಡಿ ಈ ಇಲಾಖೆಯಲ್ಲಿರುವ ಎಸ್ಟಾಬ್ಲಿಷ್‌ಮೆಂಟನ್ನು ಕಡಿಮೆ ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಒಂದು ಉದಾಹರಣೆ ಹೇಳುವುದಾದರೆ ಈ ತನಿಖಾಧಿಕಾರಿಗಳು ಏನು ಇದ್ದಾರೋ ಅವರನ್ನು 3 ತಾಲ್ಲೂಕಿಗೆ ಒಬ್ಬರಂತೆ ನೇಮಿಸಿ. ಗುಬ್ಬಿ

(ಶ್ರೀ ಎನ್. ಬಸವಯ್ಯ)

ತಾಲ್ಲೂಕು ತೆಗೆದುಕೊಂಡರೆ ಅಲ್ಲಿ 8 ಜನ ತನಿಖಾಧಿಕಾರಿಗಳು ಇದ್ದಾರೆ. ಈ ರೀತಿ ಅಧಿಕಾರಿಗಳ ಸಂಖ್ಯೆ ಬೆಳೆದುಕೊಂಡು ಹೋಗುತ್ತಿದೆಯೇ ವಿನಃ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ದೊರಕುತ್ತಾ ಇಲ್ಲ.

ಇನ್ನು ಕಡ್ಡಾಯ ಶಿಕ್ಷಣ ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ, ಈಗ ಮಕ್ಕಳನ್ನು ಸೇರಿಸಬೇಕಾದರೆ 5 ವರ್ಷ 10 ತಿಂಗಳು ಆಗಿರಬೇಕು. ಹಿಂದೆ ಇದ್ದ ಎ ಮತ್ತು ಬಿ ಅನ್ನುವ ತರಗತಿಯನ್ನು ತೆಗೆದುಬಿಟ್ಟಿದ್ದಾರೆ. ಹಿಂದೆ ಎ ಕ್ಲಾಸ್‌ನಲ್ಲಿ ಸೇರುವ ಹುಡುಗನಿಗೆ ಅಕ್ಷರಾಭ್ಯಾಸ ಮಾಡಿ 6 ತಿಂಗಳಾದ ಮೇಲೆ ಬಿ ಪಾಠಗಳನ್ನು ಓದಿಸುವುದಕ್ಕೆ ಷುರು ಮಾಡುತ್ತಿದ್ದರು. ಕಾರಣ ಅವನಿಗೆ ಮೊದಲು ಅಕ್ಷರಾಭ್ಯಾಸ ಇದ್ದರೆ ಮುಂದಿನ ವ್ಯಾಸಂಗಕ್ಕೆ ಅನುಕೂಲವಾಗುತ್ತಿತ್ತು. ಈಗ ಏನಾಗಿದೆ ಎಂದರೆ ಅವನಿಗೆ ಅಕ್ಷರಾಭ್ಯಾಸವೇ ಇರುವುದಿಲ್ಲ. ಮೊದಲನೇ ಪಾಠದಲ್ಲೇ ಅವನಿಗೆ 'ಅವನು ಬಸವ, ಇವಳು ಕಮಲ' ಈ ರೀತಿ ಪಾಠ ಹೇಳಿಕೊಡುತ್ತಾರೆ. ಇದರಿಂದ ಏನು ಕಂಡುಬರುತ್ತದೆ ಎಂದರೆ ನಿಜವಾಗಿಯೂ ಈ ಅಕ್ಷರಾಭ್ಯಾಸದ ಬಗ್ಗೆ ಹೆಚ್ಚು ಗಮನವಿಲ್ಲ ಮತ್ತು ಆಸಕ್ತಿ ಕಡಿಮೆ ಎಂದು ಕಂಡುಬರುತ್ತದೆ. ಆದುದರಿಂದ ಅಕ್ಷರಾಭ್ಯಾಸಕ್ಕೆ ಪ್ರಥಮ ಗಮನ ಕೊಡಬೇಕು ಎಂದು ಹೇಳುತ್ತೇನೆ. ಮತ್ತು ಮೊದಲು ಇದ್ದ ಹಾಗೆ 5 ವರ್ಷಕ್ಕೆ ಆ ಮಕ್ಕಳನ್ನು ಅಡ್ಮಿಷನ್ ಮಾಡಿ ಎ ಕ್ಲಾಸ್‌ನಲ್ಲಿ ಕೂಡಿಸಿಕೊಂಡು ಅಕ್ಷರಾಭ್ಯಾಸ ಮಾಡಿಸಿ, ಅನಂತರ ಬಿ ಕ್ಲಾಸ್‌ನಲ್ಲಿ ಪಠ್ಯ ಪುಸ್ತಕಗಳನ್ನು ಓದತಕ್ಕಂಥ ಕ್ರಮ ಮಾಡಬೇಕು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

10–00 A.M.

ಪ್ರಾಥಮಿಕ ಶಾಲೆಯ ಅಧ್ಯಾಪಕರುಗಳಿಗೆ ಬಹಳ ತೊಂದರೆ ಇದೆ. ಅವರನ್ನು ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ವರ್ಗ ಮಾಡುವುದು ಒಂದು ತೊಂದರೆ. ಅವರಲ್ಲಿ ಏನಾದರೂ ತಪ್ಪಿದ್ದರೆ ತಾಲ್ಲೂಕಿನಿಂದ ಹೊರಗೆ ವರ್ಗ ಮಾಡಲಿ. ಅವರಿಗೆ ಇತರೇ ಇಲಾಖೆಗಳಲ್ಲಿದ್ದಂತೆ ಬಡ್ತಿ ಮುಂತಾದುವು ಇಲ್ಲ. ಸೀನಿಯಾರಿಟಿ ಮೇಲೆ ಮುಖ್ಯ ಉಪಾಧ್ಯಾಯರ ಹುದ್ದೆಯನ್ನು ಹೊಂದಬಹುದು. ಅವರ ಜೀವಿತವೆಲ್ಲ ಮೊದಲು ಪ್ರಾರಂಭವಾದ ಸ್ಕೇಲಿನಲ್ಲಿಯೇ ಕಳೆಯಬೇಕಾಗಿದೆ. ಮೊದಲು ಪ್ರಾರಂಭವಾದ ಸ್ಕೇಲಿನಲ್ಲಿಯೇ ಮುಂದುವರಿದು, ಅದರಲ್ಲಿಯೇ ಸ್ಟಾಗ್‌ನೇಟಾಗಬೇಕಾಗಿದೆ. ಅವರಿಗೆ ಯಾವುದೇ ಪ್ರಮೋಷನ್ ಸ್ಕೇಲುಗಳಿಲ್ಲ. ಇತರೇ ಇಲಾಖೆಗಳಲ್ಲಿ, ಮತ್ತು ವಿದ್ಯಾಭ್ಯಾಸದ ಇತರ ವಿಭಾಗಗಳಲ್ಲಿ ಬಡ್ತಿ ಹೊಂದಲು ಅವಕಾಶವಿರುವಂತೆ ಪ್ರಾಥಮಿಕ ವಿದ್ಯಾಭ್ಯಾಸ ಕ್ಷೇತ್ರದಲ್ಲಿಯೂ ಮಾಡಿ ಪ್ರಾಥಮಿಕ ಉಪಾಧ್ಯಾಯರ ಹುದ್ದೆಯನ್ನೂ ಆಕರ್ಷಣೀಯ ಮಾಡಬೇಕೆಂದು ಹೇಳುತ್ತೇನೆ. ಕೆಲವು ಜಿಲ್ಲಾಧಿಕಾರಿಗಳು ಮತ್ತು ಡಪ್ಯುಟಿ ಡೈರೆಕ್ಟರುಗಳು ಉಪಾಧ್ಯಾಯರನ್ನು ಬೇರೆ ಕಡೆಗೆ ವರ್ಗ ಮಾಡುವುದನ್ನೇ ಒಂದು ಉದ್ಯೋಗವನ್ನಾಗಿ ಮಾಡಿಕೊಂಡಿದ್ದಾರೆ. ಉಪಾಧ್ಯಾಯರನ್ನು ಮಧ್ಯ ಕಾಲದಲ್ಲಿ ವರ್ಗಾವಣೆ ಮಾಡಿ ಅವರಿಂದ ಯಾವುದೋ ಅಪೇಕ್ಷೆ ಹೊಂದಲು ಪ್ರಯತ್ನ ಮಾಡುತ್ತಾರೆ. ಅವರು ಕೊಡದೆ ಇದ್ದರೆ ಕಿರುಕುಳ ಕೊಡುವ ಪದ್ಧತಿಯನ್ನು ಮಾಡಿಕೊಂಡಿದ್ದಾರೆ. ಉದಾಹರಣೆಗೆ ತುಮಕೂರಿನಲ್ಲಿ ಹಂಗಾಮಿಯಾಗಿ ಒಬ್ಬ ಡಿ. ಡಿ.ಪಿ.ಐ. ಇದ್ದಾರೆ. ಅವರು ಉಪಾಧ್ಯಾಯರಿಗೆ ತೊಂದರೆ, ಕಿರುಕುಳ ಕೊಡುತ್ತಿದ್ದಾರೆ. ಉಪಾಧ್ಯಾಯರನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗ ಮಾಡುವುದು, ಗಂಡ ಹೆಂಡತಿ ಒಂದೇ ಊರಿನಲ್ಲಿದ್ದರೆ ಅವರನ್ನು ಬೇರೆ ಬೇರೆ ಕಡೆ ವರ್ಗ ಮಾಡುವುದು ಇವನ್ನೆಲ್ಲ ಉದ್ದೇಶಪೂರ್ವಕವಾಗಿ ಮಾಡುತ್ತಾ ಇದ್ದಾರೆ. ಈ ರೀತಿ ಅನ್ಯಾಯವಾಗದಂತೆ ಮೇಲ್ಪಟ್ಟ ಅಧಿಕಾರಿಗಳು ನೋಡಿಕೊಳ್ಳಬೇಕು ಎಂದು ಹೇಳುತ್ತೇನೆ. ನಾನು ಕೆಲವು ಉಪಾಧ್ಯಾಯರ ಪರವಾಗಿ ಒಂದು ಅರ್ಜಿ ಕೊಟ್ಟು, ಡೈರೆಕ್ಟರ್ ಆಫೀಸಿನಲ್ಲಿ ಆರ್ಡರ್ ಮಾಡಿಸಿ ಕಳುಹಿಸಿದ್ದರೂ ಕೂಡ, ಇದುವರೆಗೂ ಆ ಪತ್ರ ತಮ್ಮ ಆಫೀಸಿಗೆ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಇಂಥ ಅಧಿಕಾರಿಗಳೂ ಇದ್ದಾರೆ. ಅಧಿಕಾರಿಗಳ ಈ ತರಹ ಕನಿಷ್ಟ ಮಟ್ಟದಲ್ಲಿ ಹೋಗುವುದರಿಂದ ಈ ಕಾರ್ಯ ಕ್ಷೇತ್ರದಲ್ಲಿ ಕೆಲಸಕಾರ್ಯಗಳು ಕುಂಠಿತವಾಗಿರುವ ವ್ಯವಸ್ಥೆಯನ್ನು ಕಾಣುತ್ತಿದ್ದೇವೆ. ಹೀಗಾಗಬಾರದು.

ಹೈಯರ್ ಎಲಿಮೆಂಟರಿ ಶಾಲೆಗಳಿಗೆ ಜವಾನರನ್ನು ಕೊಡತಕ್ಕ ಪದ್ಧತಿಯನ್ನು ನಿಲ್ಲಿಸಿರುವುದರಿಂದ ಕೆಲವು ಕಡೆ ಉಪಾಧ್ಯಾಯರೇ ಕಸ ಹೊಡೆಯುವ ಕೆಲಸವನ್ನು ಮಾಡಬೇಕಾಗಿದೆ ಇಲ್ಲವೇ ಆ ಶಾಲೆಯಲ್ಲಿರುವ ಮಕ್ಕಳಿಂದ ಆ ಕೆಲಸವನ್ನು ಮಾಡಿಸುತ್ತಾರೆ. ಮಕ್ಕಳು ಮಾಡದೆ ಇದ್ದರೆ ಕಸಕಡ್ಡಿ ಹಾಗೆಯೇ ಇರುತ್ತದೆ. ಕಡ್ಡಾಯ ಪ್ರಾಥಮಿಕ ಶಿಕ್ಷಣ ಜಾರಿಗೆ ಬಂದಿದೆ. ಶಾಲೆಗೆ ಬರದೆ ಇರುವ

ಮಕ್ಕಳನ್ನು ಕರೆದುಕೊಂಡು ಬರಲು ಉಪಾಧ್ಯಾಯರೇ ಹೋಗಬೇಕಾಗುತ್ತದೆ. ಉಪಾಧ್ಯಾಯರು ಗಳು ಹೋಗದಿದ್ದರೆ ಅಟೆಂಡೆನ್ಸ್ ಇಲ್ಲದೆ ಹೋಗುತ್ತದೆ. ಅಂಥ ಶಾಲೆಗಳಿಗೆ ತೊಂದರೆಯಾಗದಂತೆ ಇರಲು ಜವಾನರನ್ನು ಕೊಡುವ ಪದ್ಧತಿಯನ್ನು ಮುಂದುವರಿಸಬೇಕು. ವಿಧಾನ ಸೌಧದಲ್ಲಿ ಲೆಕ್ಕ ವಿಲ್ಲದಷ್ಟು ಜವಾನರಿದ್ದಾರೆ, ವಿದ್ಯಾ ಇಲಾಖೆಯಲ್ಲಿ ಜವಾನರನ್ನು ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಹೈಯರ್ ಪ್ರಾಥಮಿಕ ಶಾಲೆಗಳಿಗೆ ಕೂಡ ಜವಾನರನ್ನು ಕೊಡತಕ್ಕ ಪದ್ಧತಿಯನ್ನು ಮುಂದುವರಿಸ ಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಹೊಸದಾಗಿ ಜೂನಿಯರ್ ಕಾಲೇಜುಗಳನ್ನು ತೆಗೆದಿದ್ದಾರೆ. ಪ್ರತಿ ತಾಲ್ಲೂಕಿನಲ್ಲಿಯೂ ಜುನಿಯರ್ ಕಾಲೇಜುಗಳನ್ನು ತೆಗೆಯಬೇಕು. ಯಾವ ಯಾವ ತಾಲ್ಲೂಕುಗಳಲ್ಲಿ ಜೂನಿಯರ್ ಕಾಲೇಜುಗಳಿಲ್ಲ ಅಂಥ ತಾಲ್ಲೂಕುಗಳಿಗೆ ದಯಮಾಡಿ ಜೂನಿಯರ್ ಕಾಲೇಜುಗಳನ್ನು ಕೊಡುತ್ತೇವೆನ್ನುವ ಭರವಸೆಯನ್ನು ಮಾನ್ಯ ಮಂತ್ರಿಗಳು ಕೊಡಬೇಕೆಂದು ಪ್ರಾರ್ಥನೆ ಮಾಡುತ್ತ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀಮತಿ ವಿಜಯ ದೇಸಾಯಿ (ಚಿತಾಪುರ).—ಅಧ್ಯಕ್ಷರೇ, ನಮ್ಮ ಮುಂದಿರುವ ಬೇಡಿಕೆಗಳನ್ನು ಅನುಮೋದಿಸುತ್ತ ವಿದ್ಯಾಭ್ಯಾಸದ ವಿಷಯವಾಗಿ ಒಂದೆರಡು ಸಲಹೆಗಳನ್ನು ನಾನು ಕೊಡ ಬಯಸುತ್ತೇನೆ. ಈ ಹೊತ್ತಿನ ಪರಿಸ್ಥಿತಿಗನುಗುಣವಾಗಿ ನೋಡಿದರೆ ವಿದ್ಯಾಭ್ಯಾಸ ಮನುಷ್ಯನಿಗೆ ಅತ್ಯಾವಶ್ಯಕವಾದಂಥ ಮಹತ್ವದ ವಿಷಯವಾಗಿದೆ. ಆದ್ದರಿಂದ ಈ ಖಾತೆಗೆ ಸುಮಾರು 60 ಕೋಟಿ ರೂಪಾಯಿ ಒದಗಿಸುವುದು ಸ್ವಾಗತಾರ್ಹವಾಗಿದೆ.

ಗುಲ್ಬರ್ಗ ಜಿಲ್ಲೆಯಲ್ಲಿ ರೆಸಿಡೆನ್ಷಿಯಲ್ ಸ್ಕೂಲ್ ಅಥವಾ ಸೈನಿಕ ಸ್ಕೂಲ್ ಯಾವುದೂ ಇಲ್ಲ. ಅದಕ್ಕಾಗಿ ಒಂದು ರೆಸಿಡೆನ್ಷಿಯಲ್ ಸ್ಕೂಲ್ ಫಾರ್ ವುಮೆನ್ ಗುಲ್ಬರ್ಗ ಜಿಲ್ಲೆಯಲ್ಲಿ ಪ್ರಾರಂಭಿಸ ಬೇಕೆಂದು ಬೇಡಿಕೊಳ್ಳುತ್ತೇನೆ.

ಸೋಷಿಯಲ್ ಎಜ್ಯುಕೇಷನ್ ವಿಷಯವಾಗಿ ಮಾತನಾಡಬೇಕೆಂದರೆ, ನಮ್ಮ ರಾಜ್ಯದಲ್ಲಿ ಎಲ್ಲ ಕಡೆಯೂ ಲೈಬ್ರರಿಗಳನ್ನು ಅತ್ಯಾವಶ್ಯಕವಾಗಿ ಪ್ರಾರಂಭ ಮಾಡಬೇಕು. ಎಂದು ನಾನು ಸಲಹೆ ಮಾಡುತ್ತೇನೆ. ಸ್ತ್ರೀಯರಿಗೆ ರಾಜ್ಯಾಂಗದಲ್ಲಿ ಸಮಾನತೆ, ಸಮಾನ ಹಕ್ಕು ಇದ್ದರೂ ನಾವು ನೋಡುವಂತೆ ಹಳ್ಳಿಯ ಜನ ವಸತಿಯಲ್ಲಿ ಅರ್ಧ ಭಾಗದಷ್ಟು ಜನ ಪ್ಯಾರಲೈಸ್ ಆದಂತಿದ್ದಾರೆ. ಈ ಜನತೆಗೆ ದೇಶದ ಆಗುಹೋಗುಗಳು ತಿಳಿಯುತ್ತಿಲ್ಲ. ನಮ್ಮ ಮುಖ್ಯ ಮಂತ್ರಿಗಳು ಯಾರು, ನಮ್ಮ ವಿದ್ಯಾ ಮಂತ್ರಿಗಳು ಯಾರು ಎನ್ನುವುದು ಸಹ ಕೆಲವು ಹಳ್ಳಿಗಳಲ್ಲಿ ಹೆಣ್ಣು ಮಕ್ಕಳಿಗೆ ಗೊತ್ತಿಲ್ಲ. ಅದಕ್ಕಾಗಿ ನಮ್ಮ ಹಳ್ಳಿಗಳಲ್ಲಿ ಎಲ್ಲ ಮಹಿಳಾ ಮಂಡಳಿಗಳಿವೆ ಅಲ್ಲಿ ಲೈಬ್ರರಿ ಇರುವುದು ಅತ್ಯಾವಶ್ಯಕವೆಂದು ಹೇಳುತ್ತೇನೆ.

ಕೆಲವು ಮಾನ್ಯ ಸ್ನೇಹಿತರು ಸೆಂಟ್ರಲ್ ಲೈಬ್ರರಿ ವಿಚಾರವಾಗಿ ಮಾತನಾಡಿದರು. ಅಲ್ಲಿ ಸ್ಟೇಟ್ ಲೈಬ್ರರಿ ಅಥಾರಿಟಿ ಕಮಿಟಿ ಇದ್ದು ಅದರಿಂದ ಮ್ಯಾನೇಜಿಂಗ್ ಕಮಿಟಿ ಮಾಡಿಕೊಂಡು ಯಾವ ಪುಸ್ತಕ ಗಳನ್ನು ಕೊಂಡುಕೊಳ್ಳಬೇಕಾದರೂ ಸ್ಟೇಟ್ ಲೈಬ್ರರಿ ಅಥಾರಿಟಿಯವರು ಸಬ್‌ಜೆಕ್ಟ್ ಎಕ್ಸ್‌ಪರ್ಟ್ ಅವರ ಅಭಿಪ್ರಾಯವನ್ನು ಕೇಳುತ್ತಾರೆ. ಆಯಾ ಸಬ್‌ಜೆಕ್ಟ್‌ನಲ್ಲಿ ಆ ಸಬ್ ಜೆಕ್ಟ್ ಎಕ್ಸ್‌ಪರ್ಟ ಕೊಟ್ಟು ಅಭಿಪ್ರಾಯದ ಪ್ರಕಾರ ಕೆಲವು ಪುಸ್ತಕಗಳನ್ನು ತೆಗೆದುಕೊಳ್ಳುತ್ತಾರೆ. ಪುಸ್ತಕ ಗಳನ್ನು ತೆಗೆದು ಕೊಳ್ಳಬೇಕಾದರೆ ಕೆಲವು ಸ್ಟ್ಯಾಂಡಿಂಗ್ ವೆಂಡರ್ಸ್ ಇರುತ್ತಾರೆ, ಅವರನ್ನು ವರ್ಷಕ್ಕೆ ಒಮ್ಮೆ ನೇಮಕ ಮಾಡುತ್ತಾರೆ ಹೀಗೆ ಮಾಡಿದ ಮೇಲೆ ಒಂದು ವರ್ಷಕ್ಕೆ ಅವರಿಂದ ಪುಸ್ತಕ ಗಳನ್ನು ತೆಗೆದುಕೊಂಡರೆ ಅದರಲ್ಲಿ ಲೈಬ್ರೇರಿಯನ್ ಎಲ್ಲಿ ಬರುತ್ತಾರೆ? ಮೆಂಬರ್‌ಗಳು ಎಲ್ಲಿ ಬರು ತ್ತಾರೆ? ಬೆಂಕಿ ಅಪಘಾತದ ವಿಷಯವಾಗಿ ಹೇಳಿದರು. ರಾತ್ರಿ ಒಂದೂವರೆ ಗಂಟೆಯಲ್ಲಿ ಇದು ನಡೆಯಿತು ಎಂದು ನನಗನ್ನಿಸುತ್ತದೆ. ಆ ವೇಳೆಯಲ್ಲಿ ಬೆಂಕಿ ಅಪಘಾತವಾದರೆ ದೇವಾನುದೇವತೆ ಗಳಿಗೂ ಗೊತ್ತಾಗುವುದಿಲ್ಲ. ಹೀಗಿರುವಾಗ ಲೈಬ್ರೇರಿಯನ್ ಅವರಿಗೆ ಏನು ಗೊತ್ತು? ಬೆಂಕಿ ಅಪಘಾತ ನಡೆದಿರುವುದು ಆಕಸ್ಮಿಕ ಎಂದು ವರದಿ ಬಂದಿದೆ ಮತ್ತು ಈ ಆಕಸ್ಮಿಕದಲ್ಲಿ 3700 ಪುಸ್ತಕ ಗಳು ಸುಟ್ಟು ಹೋಗಿವೆ ಎಂದು ವರದಿ ಬಂದಿದೆ. ಬೆಂಕಿ ಅಪಘಾತವಾದಾಗ ಯಾರೂ ಇರಲಿಲ್ಲ ವೆನ್ನುವುದು ನಿಜ.

ಸ್ಪೋರ್ಟ್ಸ್ ಕೌನ್ಸಿಲ್ ಇದೆ. ಅದರಲ್ಲಿ ಎಷ್ಟೋ ತರಹ ಸೌಲಭ್ಯಗಳನ್ನು ನಮ್ಮ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದಾರೆ. ನಾನು ಇದರ ಬಗ್ಗೆ ಒಂದು ಸಲಹೆ ಕೊಡಬಯಸುತ್ತೇನೆ. ಇಂಟರ್ ಸ್ಟೇಟ್ ಸ್ಪೋರ್ಟ್‌ನಲ್ಲಿ ಯಾರಾದರೂ ವಿದ್ಯಾರ್ಥಿ ಭಾಗವಹಿಸಿದ್ದರೆ, ಅತನಿಗೆ ಮೆಡಿಕಲ್ ಕಾಲೇಜು ಅಥವಾ ಪ್ರೊಫೆಷನಲ್ ಕಾಲೇಜುಗಳಲ್ಲಿ ಸೀಟು ಕೊಡಬೇಕಾದರೆ 5 ಪರ್ಸೆಂಟ್ ಮಾರ್ಕ್ಸು ಹೆಚ್ಚಾಗಿ ನೀಡಬೇ ಕೆಂದು ಸಲಹೆ ಮಾಡುತ್ತೇನೆ.

(ಶ್ರೀಮತಿ ವಿಜಯ ದೇಸಾಯಿ)

ಪ್ರೀ ಪ್ರೈಮರಿ ಎಜುಕೇಷನ್ ಎಂದರೆ ಶಿಶುವಿಹಾರದ ಬಗ್ಗೆ ಹೇಳಬೇಕಾದರೆ 917 ಶಿಶು ವಿಹಾರಗಳು ಇವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಅಲ್ಲದೆ ವಾಲಂಟರಿ ಏಜೆನ್ಸೀಸ್ ಮುಂದೆ ಬಂದರೆ ಆ ಸಂಸ್ಥೆಗಳಿಗೆ ಬೆಂಬಲ ಕೊಡುತ್ತೇವೆಂದು ಹೇಳಿದ್ದಾರೆ. ಜಿಲ್ಲಾ ಮಟ್ಟಗಳಲ್ಲಿ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಇಂಥ ನರ್ಸರಿ ಶಾಲೆಗಳನ್ನು ನಡೆಸಬಹುದು. ಆದರೆ ಹಳ್ಳಿಗಳಲ್ಲಿ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ನನ್ನ ಭಾವನೆ. ಅದಕ್ಕಾಗಿ ಹಳ್ಳಿಗಳಲ್ಲಿ ವಿದ್ಯಾ ಇಲಾಖೆಯವರು ಶಿಶುವಿಹಾರಗಳನ್ನು ನಡೆಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಹೆಣ್ಣು ಮಕ್ಕಳ ಶಾಲೆಗಳಿಗೆ ಪೂರ್ಣ ಗ್ರಾಂಟನ್ನು ವಿದ್ಯಾಭ್ಯಾಸದ ಇಲಾಖೆಯಿಂದ ಕೊಡಲಾಗುತ್ತಿದೆ. ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕಾಗಿದೆ. ಹೆಚ್ಚು ಹೆಚ್ಚಾಗಿ ಹೆಣ್ಣು ಮಕ್ಕಳು ವಿದ್ಯಾಭ್ಯಾಸ ಮಾಡುವುದಕ್ಕೆ ಹೆಚ್ಚು ಹೆಚ್ಚಾಗಿ ಹೆಣ್ಣು ಮಕ್ಕಳು ಕಲಿಯಲು ಶಾಲೆಗಳಿಗೆ ಬರುವುದಕ್ಕೆ ಬೇಕಾದಂಥ ವ್ಯವಸ್ಥೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಶಾಲಾ ಕಟ್ಟಡಗಳಿಗಾಗಿ ಸರ್ಕಾರದಿಂದ ಒಂದು ಸಾವಿರ ರೂಪಾಯಿ ತಾಲ್ಲೂಕು ಬೋರ್ಡ್ 500 ರೂಪಾಯಿ ಮತ್ತು ಸ್ಥಳೀಯ ಜನರು ಒಂದು ಸಾವಿರ ರೂಪಾಯಿ ಕೊಡಬೇಕೆಂದಿದೆ. 2,500 ರೂಪಾಯಿಗಳಲ್ಲಿ ಶಾಲಾ ಕಟ್ಟಡ ಆಗಲಿಕ್ಕೆ ಸಾಧ್ಯವಿಲ್ಲ. ಆದಕ್ಕಾಗಿ ಈಗ ಸರ್ಕಾರದವರು ಕೊಡುತ್ತಿರುವ ಗ್ರಾಂಟನ್ನು ಒಂದು ಸಾವಿರದಿಂದ ಮೂರು ಸಾವಿರಕ್ಕೆ ಹೆಚ್ಚು ಮಾಡಿದರೆ ಸರಿಹೋಗುತ್ತದೆ ಎಂದು ನಾನು ಸಲಹೆ ಮಾಡುತ್ತೇನೆ.

ಗುಲ್ಬರ್ಗದಲ್ಲಿ ಒಂದು ವೊಕೇಷನಲ್ ಇನಸ್ಟಿಟ್ಯೂಟ್ ಇತ್ತು. ಐದು ವರ್ಷಗಳ ಹಿಂದೆ ಅದನ್ನು ಮುಚ್ಚಿದರು. ಗರ್ಲ್ಸ್ ಪಾಲಿಟೆಕ್ನಿಕ್ ತೆಗೆಯುತ್ತೇವೆ, ವೊಕೇಷನಲ್ ಇನ್‌ಸ್ಟಿಟ್ಯೂಟ್ ಬೇಡ ಅದನ್ನು ಮುಚ್ಚಲಾಯಿತು. ಅದರಲ್ಲಿ ಲಾಂಡ್ರಿ, ಲೆದರ್ ವರ್ಕ್, ಟೈಲರಿಂಗ್, ಕುಕಿಂಗ್, ಎಂಬ್ರಾಯಿಡರಿ ಇವೆಲ್ಲ ಇದ್ದುವು. ಪಾಲಿಟೆಕ್ನಿಕ್‌ಗಳಲ್ಲಿ ಕೂಡ ಇದನ್ನೆಲ್ಲ ಇಟ್ಟಿದ್ದಾರೆ. ಆದುದರಿಂದ ಗುಲ್ಬರ್ಗದಲ್ಲಿ ಹೆಣ್ಣು ಮಕ್ಕಳಿಗಾಗಿ ಒಂದು ಪಾಲಿಟೆಕ್ನಿಕ್ ತೆಗೆಯಬೇಕೆಂದು ನಾನು ಸಲಹೆ ಮಾಡುತ್ತೇನೆ. ಇದರಲ್ಲಿ ಕೆಲವು ವಿಷಯಗಳಲ್ಲಿ ಒಂದು ವರ್ಷದ ಕೋರ್ಸನ್ನು ಲಾಂಡ್ರಿ, ಕುಕಿಂಗ್, ಹೌಸ್ ಎಲೆಕ್ಟ್ರಿಫಿಕೇಷನ್ ಇಂಥ ವಿಷಯಗಳಲ್ಲಿ ಇಡಬಹುದು. ಒಂದು ಮನೆಯಲ್ಲಿ ಫ್ಯೂಸ್ ಹೋದರೆ ಹೆಣ್ಣು ಮಕ್ಕಳು ತಮ್ಮ ಗಂಡಂದಿರು ಮನೆಗೆ ಬರುವವರೆಗೂ ಹಾಗೆಯೇ ಇರಬೇಕಾಗುತ್ತದೆ. ಫ್ಯೂಸ್ ಹೋಗಿದ್ದರ ಅದನ್ನು ಹೇಗೆ ಹಚ್ಚಬೇಕು, ಎಲ್ಲಿ ಹಚ್ಚಬೇಕು, ಎನ್ನುವುದು ಅವರಿಗೆ ಗೊತ್ತಾಗುವುದಿಲ್ಲ. ಇಂಥ ವಿಷಯಗಳನ್ನು ಪಾಲಿಟೆಕ್ನಿಕ್‌ಗಳಲ್ಲಿ ಹೇಳಿ ಕೊಡುವುದಕ್ಕೆ ಅವಕಾಶ ಮಾಡಿದರೆ ನಮ್ಮ ಮಹಿಳೆಯರಿಗೆ ಸಹಾಯವಾಗುತ್ತದೆ ಎಂದು ಸಲಹೆ ಮಾಡುತ್ತೇನೆ.

ನಮ್ಮ ರಾಜ್ಯದಲ್ಲಿ ಹೆಣ್ಣು ಮಕ್ಕಳ ಪ್ರಾಥಮಿಕ ಶಾಲೆಗಳಿವೆ, ಸೆಕೆಂಡರಿ ಶಾಲೆಗಳಿವೆ, ಅದೇ ಪ್ರಕಾರವಾಗಿ ಕಾಲೇಜುಗಳಿವೆ. ಇದನ್ನೆಲ್ಲ ನೋಡಿದರೆ ಅಭಿನಂದಿಸಬೇಕಾಗಿದೆ. ಈಗ ಕೊಲಿಜಿಯೇಟ್ ಎಜುಕೇಷನ್ನಿಗೆ ಮಹಿಳಾ ಡೈರೆಕ್ಟರಿದ್ದಾರೆ. ಟೆಕ್ನಿಕಲ್ ಎಜುಕೇಷನ್, ಕೊಲಿಜಿಯೇಟ್ ಎಜುಕೇಷನ್, ಸೆಕೆಂಡರಿ ಮತ್ತು ಪ್ರೈಮರಿ ಎಜುಕೇಷನ್ ಇವುಗಳನ್ನೆಲ್ಲ ಸೇರಿಸಿ ಡೈರೆಕ್ಟರ್ ಫಾರ್ ವುಮನ್ ಎಜುಕೇಷನ್ ಎಂದು ಪ್ರತ್ಯೇಕ ವಿಭಾಗವನ್ನು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿಯೂ ಜೂನಿಯರ್ ಕಾಲೇಜುಗಳನ್ನು ಸರ್ಕಾರದವರು ತೆಗೆಯಬೇಕೆಂದು ಹೇಳುತ್ತೇನೆ ಈಗ 222 ಜೂನಿಯರ್ ಕಾಲೇಜುಗಳನ್ನು ತೆಗೆದಿದ್ದಾರೆ. ಎಲ್ಲೆಲ್ಲಿ ಜೂನಿಯರ್ ಕಾಲೇಜುಗಳಿಲ್ಲ ಅಲ್ಲೆಲ್ಲಾ ಜೂನಿಯರ್ ಕಾಲೇಜುಗಳನ್ನು ತೆಗೆಯಬೇಕು. ನನ್ನ ಕ್ಷೇತ್ರವಾದ ಚಿತ್ತಾಪುರದಲ್ಲಿ ಒಂದು ಜೂನಿಯರ್ ಕಾಲೇಜನ್ನು ಕೂಡಲೇ ತೆಗೆಯಬೇಕೆಂದು ಕೇಳಿಕೊಳ್ಳುತ್ತೇನೆ.

ಮೈಸೂರು ರಾಜ್ಯದಲ್ಲಿ ನಾಲ್ಕು ಡಿವಿಜನ್ನುಗಳಿವೆ. ಮೈಸೂರು ಡಿವಿಜನ್ನಿಗೆ ಮೈಸೂರಿನಲ್ಲಿ ಒಂದು ವಿಶ್ವವಿದ್ಯಾಲಯವಿದೆ, ಬೆಂಗಳೂರು ಡಿವಿಜನ್ನಿಗೆ ಬೆಂಗಳೂರಿನಲ್ಲಿ ಒಂದು ವಿಶ್ವವಿದ್ಯಾಲಯವಿದೆ, ಬೆಳಗಾಂ ಡಿವಿಜನ್ನಿಗೆ ಕರ್ಣಾಟಕ ಯೂನಿವರ್ಸಿಟಿ ಇದೆ. ಅದೇ ಪ್ರಕಾರ ನಮ್ಮ ಡಿವಿಜನ್ನಿಗೆ ಯಾವ ಯೂನಿವರ್ಸಿಟಿಯೂ ಇಲ್ಲ. ಅಷ್ಟೇ ಅಲ್ಲದೆ, 30 ಕಾಲೇಜುಗಳು ರನ್ ಆಗುತ್ತಿವೆ. 27 ಜೂನಿಯರ್ ಕಾಲೇಜುಗಳನ್ನು ನೀವೇ ಸ್ಯಾಂಕ್ಷನ್ ಮಾಡಿದ್ದೀರಿ. 30 ಕಾಲೇಜುಗಳು ಎಲ್ಲಿ ರನ್ ಆಗುತ್ತಿವೆಯೋ ಆ ಡಿವಿಜನ್‌ಗೆ ಒಂದು ಯೂನಿವರ್ಸಿಟಿ ಕೊಡುತ್ತೇ

ವೆಂದು ಯೂನಿವರ್ಸಿಟಿ ಗ್ರ್ಯಾಂಟ್ಸ್ ಕಮಿಷನ್ ಪ್ರಕಾರ ನಮಗೆ ಒಂದು ಯೂನಿವರ್ಸಿಟಿ ಆಗಬೇಕು. ಅದನ್ನು ಗುಲ್ಬರ್ಗ ಡಿವಿಜನ್‌ನಲ್ಲಿ ಎಸ್ಟಾಬ್ಲಿಷ್ ಮಾಡುತ್ತೀರಿ ಎಂದು ನಾನು ನಂಬಿದ್ದೇನೆ. ಗುಲ್ಬರ್ಗದಲ್ಲಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು ಸ್ಟಾರ್ಟ್ ಆದಾಗ ಅಲ್ಲಿ ಬ್ಯಾಲೆನ್ಸ್ ತೆಗೆದುಕೊಂಡಿದ್ದರು. ಅದರಲ್ಲಿ ವೈಟ್ ಸರಿಯಾಗಿ ಬರುತ್ತಿಲ್ಲ. ಆದುದರಿಂದ ಅದನ್ನು ರೀಪ್ಲೇಸ್ ಮಾಡಬೇಕು. ಅಲ್ಲಿ ಫಸ್ಟ್‌ಕ್ಲಾಸ್ ಮೈಕ್ರೋಸ್ಕೋಪ್ ತೆಗೆದುಕೊಂಡಿದ್ದಾರೆ. ಅದು ಎಲ್ಲೋ ಮೂಲೆಯಲ್ಲಿ ಬಿದ್ದು ಹೋಗಿದೆ.

It is a very costly microscope.

ಅದನ್ನು ಪೂರ್ತಿ ಯುಟಿಲೈಸ್ ಮಾಡಿಕೊಳ್ಳಬೇಕು ಎಂದು ಹೇಳಿ ಇವತ್ತಿನ ದಿವಸ ಇಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಬಿ. ಎಸ್. ವೀರಭದ್ರಪ್ಪ (ಕೂಡ್ಲಿಗಿ).—ಸನ್ಮಾನ್ಯ ಸಭಾಧ್ಯಕ್ಷರೇ, ಈಗ ವಿದ್ಯಾ ಇಲಾಖೆಯವರು 60 ಕೋಟಿ ರೂಪಾಯಿಗಳ ಬೇಡಿಕೆಯನ್ನು ಆಯವ್ಯಯದಲ್ಲಿ ಮಂಡಿಸಿದ್ದಾರೆ. ಅದರಲ್ಲಿ ಕೇವಲ 5 ಕೋಟಿ ರೂಪಾಯಿಗಳು ಮಾತ್ರ ಬಿಲ್ಡಿಂಗ್ ಮತ್ತು ಎಕ್ವಿಪ್‌ಮೆಂಟ್ ಮತ್ತು ಇತರ ಡೆವಲಪ್‌ಮೆಂಟ್ ಕೆಲಸಗಳಿಗೆ ನಿಗದಿ ಮಾಡಿದ್ದಾರೆ. ಉಳಿದದ್ದನ್ನು ಸಂಬಳ-ಸಾರಿಗೆ ಮತ್ತು ಇತರ ಖರ್ಚುಗಳಿಗಾಗಿ ಖರ್ಚು ಮಾಡುತ್ತಾರೆ. ಆದ್ದರಿಂದ ಎಕ್ವಿಪ್‌ಮೆಂಟ್ ಬಿಲ್ಡಿಂಗ್ ಗ್ರ್ಯಾಂಟ್ ಮತ್ತು ಫರ್ನೀಚರ್‌ಗಾಗಿ ಸಾಕಷ್ಟು ಹಣವನ್ನು ಇದರಲ್ಲಿ ನಿರ್ದಿಷ್ಟವಾಗಿ ಇಡಬೇಕು ಎಂದು ವಿನಂತಿಸುತ್ತೇನೆ. ಈಗ ನಮ್ಮ ರಾಜ್ಯದಲ್ಲಿ ಕಡ್ಡಾಯ ಶಿಕ್ಷಣ ಜಾರಿಯಲ್ಲಿದೆ. ಅದರೆ ಕಡ್ಡಾಯ ಶಿಕ್ಷಣ ಬಹಳ ವಿಫಲಗೊಂಡಿದೆ. ಪ್ರತಿಯೊಂದು ಹಳ್ಳಿಯಲ್ಲೂ ಮಕ್ಕಳ ಸಂಖ್ಯೆ ಜಾಸ್ತಿಯಾದರೂ ಕೂಡ ಶಾಲೆಯಲ್ಲಿ ಹಾಜರಿ ಸಂಖ್ಯೆ ಕಡಿಮೆ ಇದೆ. ಕಡ್ಡಾಯ ಶಿಕ್ಷಣ ಯಶಸ್ವಿಯಾಗಬೇಕಾದರೆ, ಪ್ರತಿಯೊಂದು ಗ್ರಾಮ ಪಂಚಾಯತಿಗಳಲ್ಲಿ ಒಂದೊಂದು ಉತ್ತಮ ದರ್ಜೆಯ ಶಿಶುವಿಹಾರಗಳನ್ನು ಸರ್ಕಾರದವರು ನಡೆಸಲಿಕ್ಕೆ ಪ್ರಾರಂಭಿಸಿದರೆ, ಮಕ್ಕಳು ಶಾಲೆಗೆ ಹೋಗುವ ಮನೋಭಾವ ಬೆಳೆಯುತ್ತದೆ. ಆದ್ದರಿಂದ ಪ್ರತಿಯೊಂದು ಹಳ್ಳಿಗಳಲ್ಲಿಯೂ ಒಂದೊಂದು ಶಿಶುವಿಹಾರಗಳನ್ನು ಪ್ರಾರಂಭಿಸಬೇಕೆಂದು ಸೂಚಿಸಬಯಸುತ್ತೇನೆ. ಮಧ್ಯಾಹ್ನದ ಊಟದ ವ್ಯವಸ್ಥೆ ಬಹಳ ಸುಮಾರಾಗಿದೆ. ಏಕೆಂದರೆ, ಕೇರ್ ಸಂಸ್ಥೆಯವರು ಇದಕ್ಕೆ 12 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ, 40 ಲಕ್ಷ ರೂಪಾಯಿ ಪ್ರಕಾರ ಖರ್ಚು ಮಾಡುತ್ತಿದೆ. ಈ ಒಂದು ವ್ಯವಸ್ಥೆಗೆ 52 ಲಕ್ಷ ರೂಪಾಯಿ ಖರ್ಚು ಮಾಡಿದರೂ ಮಕ್ಕಳಿಗೆ ಸರಿಯಾಗಿ ಆಹಾರ ಸಿಗುವುದಿಲ್ಲ. ಎಷ್ಟೋ ಮಂದಿ ಈ ಕೇರ್ ಸಂಸ್ಥೆಯವರು ಕೊಟ್ಟಂಥ ಆಹಾರ ಪದಾರ್ಥಗಳನ್ನು ಮಾರಿಕೊಂಡು ಜೀವನ ಮಾಡುತ್ತಿದ್ದಾರೆ. ಈ ವ್ಯವಸ್ಥೆ ಬಹಳ ಅನ್ಯಾಯದ ವ್ಯವಸ್ಥೆಯಿಂದ ನಡೆಯುತ್ತಿದೆ. ಕೇರ್ ಸಂಸ್ಥೆಯವರು ಕೊಡುತ್ತಿರುವುದನ್ನು ಸರಿಯಾಗಿ ಉಪಯೋಗವಾಗುವಂತೆ ನೋಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ವಿನಂತಿಸುತ್ತೇನೆ. ಒಳ್ಳೆಯ ರೀತಿಯಲ್ಲಿ ವ್ಯವಸ್ಥೆ ನಡೆಯಲಿಕ್ಕೆ ಸರ್ಕಾರ ಮತ್ತು ಅಧಿಕಾರಿಗಳು ಹೆಚ್ಚಿನ ಗಮನ ಕೊಡಬೇಕು ಎಂದು ವಿನಂತಿಸುತ್ತೇನೆ.

ಇನ್ನು ಬಳ್ಳಾರಿ ಜಿಲ್ಲೆಯಲ್ಲಿ 400—500 ಖಾಸಗಿ ಪ್ರೈಮರಿ ಶಾಲೆಗಳು ಮತ್ತು ಮಿಡಲ್ ಸ್ಕೂಲುಗಳನ್ನು ಎರಡು ವರ್ಷಗಳ ಹಿಂದೆ ಸರ್ಕಾರಕ್ಕೆ ಸೇರಿಸಿಕೊಂಡರು. ಹಾಗೆ ಸೇರಿಸಿಕೊಂಡಾಗ ಉಪಾಧ್ಯಾಯರುಗಳಿಗೆ ಪ್ರಮೋಷನ್ ಗ್ರೇಡ್ ಕೊಡುವಾಗ ಅವರನ್ನು ಕನ್‌ಸಿಡರ್ ಮಾಡುತ್ತೇವೆ ಎಂದು ಭರವಸೆ ಕೊಟ್ಟಿದ್ದರು. ಆದರೆ ಇಲ್ಲಿಯವರೆಗೆ 15—20 ವರ್ಷಗಳಿಂದ ಕೆಲಸ ಮಾಡಿದ್ದರೂ ಅವರಿಗೆ ಪ್ರಮೋಷನ್ ಸಿಗಲಿಲ್ಲ ಮತ್ತು ಯಾವ ತರಹದ ಅನುಕೂಲವನ್ನು ಸರ್ಕಾರದವರು ಮಾಡಿಕೊಟ್ಟಿಲ್ಲ. ಆದ್ದರಿಂದ ಈ ಇನ್‌ಸ್ಪೆಕ್ಟರ್ ಮತ್ತು ಎ ಇ ಒ ಗಳ ಪೋಸ್ಟ್‌ಗಳಿಗೆ ನೇಮಕ ಮಾಡುವಾಗ ಈ ಖಾಸಗೀ ಶಾಲೆಯ ಉಪಾಧ್ಯಾಯರನ್ನು ಕೂಡ ಗಣನೆಗೆ ತೆಗೆದುಕೊಂಡು ಅವರಿಗೆ ಪ್ರಮೋಷನ್ ಕೊಡಬೇಕು ಎಂದು ಈ ಸಂದರ್ಭದಲ್ಲಿ ಸೂಚಿಸಬಯಸುತ್ತೇನೆ.

ಪ್ರತಿಯೊಂದು ಶಾಲೆಯಲ್ಲಿಯೂ ಲೈಬ್ರರಿ, ಪೀಠೋಪಕರಣಗಳು ಮತ್ತು ಬೋಧನಾ ಉಪಕರಣಗಳನ್ನು ಹೆಚ್ಚಾಗಿ ಒದಗಿಸಬೇಕೆಂದು ಸೂಚಿಸುತ್ತೇನೆ. ಮುಖ್ಯವಾಗಿ ತಾಲ್ಲೂಕು ಮಟ್ಟದಲ್ಲಿ ಉಪಾಧ್ಯಾಯರನ್ನು ವರ್ಗಾಯಿಸುವಾಗ ಉಪಾಧ್ಯಾಯರುಗಳ ಮೇಲೆ ಏನಾದರೂ ಕಂಪ್ಲೇಂಟ್ ಬಂದರೆ ಮಾತ್ರ ವರ್ಗಾಯಿಸಬೇಕು, ಎಂದು ಸರ್ಕಾರದ ನೇಮಕ ಇದ್ದರೂ ಅನೇಕ ರೀತಿಯಲ್ಲಿ ವರ್ಗಾವಣೆ ಮಾಡುತ್ತಿದ್ದಾರೆ. ಮತ್ತು ಇವರಿಂದ ಲಂಚಕ್ಕೆ ಹೆಚ್ಚಿನ ಮಾರ್ಗ ಮಾಡಿಕೊಟ್ಟಿದ್ದಾರೆ. ಆದ್ದರಿಂದ ಈ ವರ್ಗಾಯಿಸುವುದನ್ನು ಕಡಿಮೆ ಮಾಡಿ ಲಂಚ ನಡೆಯದಂತೆ ತಾವು ಪ್ರಯತ್ನಿಸಬೇಕು. ಏಕೆಂದರೆ ನಾನು ಮೊದಲು ವಿದ್ಯಾ ಇಲಾಖೆಯಲ್ಲಿ ಲಂಚ ಇಲ್ಲ ಎಂದು ತಿಳಿದುಕೊಂಡಿದ್ದೆ. ಆದರೆ, ಈ ಎರಡು ವರ್ಷಗಳಿಂದ ಲಂಚ ಇಲ್ಲದೆ ಯಾವ ಕೆಲಸಗಳೂ ಆಗುವುದಿಲ್ಲ ಎಂದು ತಿಳಿದುಬಂದಿದೆ. ಆದುದರಿಂದ

(ಶ್ರೀ ಬಿ. ಎಸ್. ವೀರಭದ್ರಪ್ಪ)

ಲಂಚ ಕೊಡದೆ ಇರುವಂತೆ ಕ್ರಮ ತೆಗೆದುಕೊಳ್ಳಬೇಕು. ಈ ಆಯವ್ಯಯದಲ್ಲಿ ವ್ಯಾಯಾಮ ಶಾಲೆಗಳಿಗೆ ಸಹಾಯಧನವನ್ನು ನೀಡಲು ಕೇವಲ ಐದು ಸಾವಿರ ರೂಪಾಯಿಗಳನ್ನು ಮಾತ್ರ ಇಟ್ಟಿದ್ದಾರೆ. ಅದು ಬಹಳ ಕಡಿಮೆ. ಗ್ರಾಮಾಂತರ ಪ್ರದೇಶಗಳಲ್ಲಿ ಗರಡಿ ಮನೆ ಎಂದು ಏನು ಹೇಳುತ್ತೇವೆ, ಅವುಗಳಿಗೂ ಸರ್ಕಾರದವರು ಸಹಾಯ ಧನ ಕೊಡಲಿಕ್ಕೆ ಪ್ರಯತ್ನ ಮಾಡಬೇಕು. ಯುವಜನ ಸಂಘಗಳಿಗೆ ಪಂಚಾಯತಿ ಧ್ವಾರಾ ಸಹಾಯ ಧನ ಕೊಟ್ಟರೆ, ಹಳ್ಳಿಗಳಲ್ಲಿರುವ ಯುವಕರಿಗೆ ಅನುಕೂಲವಾಗುತ್ತದೆ ಎಂದು ಸೂಚಿಸುತ್ತೇನೆ. ಅದೇ ರೀತಿಯಲ್ಲಿ ಬಯಲು ನಾಟಕಗಳಿಗೂ ಪ್ರೋತ್ಸಾಹ ಕೊಡಬೇಕು. ನಿವೃತ್ತಿ ಹೊಂದಿದ ಉಪಾಧ್ಯಾಯರುಗಳಿಗೂ ಆದಷ್ಟು ಜಾಗ್ರತೆ ನಿವೃತ್ತಿ ವೇತನ ಬರುವಂತೆ ಸರ್ಕಾರದವರು ಗಮನಕೊಡಬೇಕು. ಅನೇಕ ಸಂದರ್ಭಗಳಲ್ಲಿ ನಿವೃತ್ತಿ ಹೊಂದಿದ ಮೂರು ವರ್ಷಗಳಾದರೂ ನಿವೃತ್ತಿವೇತನ ಬಾರದೆ ಕೆಲವರು ಸತ್ತಮೇಲೆ ನಿವೃತ್ತಿ ವೇತನ ಬಂದ ಪ್ರಸಂಗಗಳು ಇವೆ. ಆದ್ದರಿಂದ ಈ ನಿವೃತ್ತಿ ವೇತನವನ್ನು ನೌಕರರು ನಿವೃತ್ತಿ ಹೊಂದಿದ ಕೂಡಲೇ ಕೊಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಸೂಚಿಸುತ್ತೇನೆ.

ಮಿಡ್ಲ್‌ಸ್ಕೂಲ್ ಮತ್ತು ಹೈಸ್ಕೂಲುಗಳನ್ನು ಸರ್ಕಾರದ ಆಡಳಿತಕ್ಕೆ ತೆಗೆದುಕೊಂಡು ಜಿಲ್ಲಾ ಮಟ್ಟದಲ್ಲಿ ಬಹಳ ಉತ್ತಮವಾಗಿ ಮತ್ತು ಉನ್ನತಮಟ್ಟದಲ್ಲಿ ನಡೆಯಲಿಕ್ಕೆ ಜಿಲ್ಲಾ ಮಂಡಲಿಯನ್ನು ರಚಿಸಿದರೆ ಬಹಳ ಚೆನ್ನಾಗಿರುತ್ತದೆ. ಅಧಿಕಾರೇತರು ಮತ್ತು ಅಧಿಕಾರಿಗಳು ಇಬ್ಬರೂ ಸೇರಿ ಮಂಡಲಿ ನಡೆಸತಕ್ಕ ವ್ಯವಸ್ಥೆ ಮಾಡಿದರೆ, ಪ್ರಗತಿಪರವಾಗಿ ನಡೆಯಲಿಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಅಂಥ ಜಿಲ್ಲಾ ಮಂಡಲಿಗಳನ್ನು ರಚನೆ ಮಾಡಲಿಕ್ಕೆ ಸೂಚಿಸುತ್ತೇನೆ. ಮಿಡ್ಲ್ ಸ್ಕೂಲಿನಲ್ಲಿ ಶಾರೀರಕ ಶಿಕ್ಷಣ ಬೆಳೆಯಬೇಕು ಅದಕ್ಕಾಗಿ ಪ್ರತಿಯೊಂದು ಮಿಡ್ಲ್‌ಸ್ಕೂಲಿನಲ್ಲಿ ಶಾರೀರಿಕ ಶಿಕ್ಷಣ ಪಡೆದ ಉಪಾಧ್ಯಾಯರನ್ನು ನೇಮಿಸಬೇಕು. ಹೈಸ್ಕೂಲುಗಳಲ್ಲಿ ಡ್ರಾಯಿಂಗ್ ಉಪಾಧ್ಯಾಯರನ್ನು ನೇಮಕ ಮಾಡಬೇಕು. ಡ್ರಾಯಿಂಗ್ ಸಬ್ಜೆಕ್ಟ್ ಇಟ್ಟರೆ ಅಕ್ಷರಗಳು ದುಂಡಾಗಿ ಮತ್ತು ಮುದ್ದಾಗಿ ಇರುತ್ತವೆ. ಮದ್ರಾಸ್ ಸರ್ಕಾರದಲ್ಲಿ ಅಕ್ಷರಗಳನ್ನು ದುಂಡಾಗ ಬರೆದಂಥವರಿಗೆ 100ಕ್ಕೆ 5 ಮಾರ್ಕುಕೊಡುತ್ತಿದ್ದರು. ಅಲ್ಲಿ ಪ್ರತಿಯೊಂದು ಹೈಸ್ಕೂಲುಗಳಲ್ಲಿ ಡ್ರಾಯಿಂಗ್ ಟೀಚರ್ ಇರುತ್ತಿದ್ದರು. ಅದೇರೀತಿ ಇಲ್ಲಿಯೂ ಸರ್ಕಾರ ಪ್ರತಿಯೊಂದು ಹೈಸ್ಕೂಲುಗಳಲ್ಲಿ ಡ್ರಾಯಿಂಗ್ ಟೀಚರ್ಸ್ ನೇಮಿಸಬೇಕು. 5 ನೇ ತರಗತಿಯಿಂದ ಎಸ್.ಎಸ್.ಎಲ್.ಸಿ.ವರೆಗೆ ಇರುವ ಕ್ಲಾಸುಗಳನ್ನು ಸೇರಿಸಿ ಕಾಂಪೋಸಿಟ್ ಹೈಸ್ಕೂಲುಗಳನ್ನಾಗಿ ಮಾರ್ಪಡಿಸಬೇಕು. ಕಾಂಪೋಸಿಟ್ ಹೈಸ್ಕೂಲುಗಳು ಆದರೆ, ನಿಜವಾಗಿ ವಿದ್ಯಾರ್ಥಿಗಳ ಮಟ್ಟ ಬೆಳೆಯುತ್ತದೆ. ಮಿಡ್ಲ್‌ಸ್ಕೂಲ್ ನಿಂದ ಬಂದಂಥವರು ಚೆನ್ನಾಗಿಲ್ಲವೆಂದು ಹೈಸ್ಕೂಲು ಮಟ್ಟದಿಂದ ಬಂದವರು ಚೆನ್ನಾಗಿಲ್ಲವೆಂದು ಕಾಲೇಜಿನಲ್ಲಿ ಫೇಲ್ ಆಗುತ್ತಾರೆ ಎನ್ನುವ ಅಪವಾದ ಇರುತ್ತದೆ. ಕಾಂಪೊಸಿಟ್ ಹೈಸ್ಕೂಲು ಆದರೆ, ವಿದ್ಯಾ ಮಟ್ಟ ಚೆನ್ನಾಗಿರುತ್ತದೆ. ಇಷ್ಟು ಮಾತನಾಡಲು ಸಮಯವನ್ನು ಕೊಟ್ಟಂಥ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Smt. SUMATI BALACHANDRA MADIMAN (Dharwar—Rural).—Mr. Speaker, Sir, I would like to give a few suggestions on demands on education. First, I would insist that pre-primary education is very important because it is the basis and foundation of education, which, I should say, is rather badly neglected, specially in rural areas. Although it has been suggested that the Mahila Mandalas and the T. D. Bs have to run such schools, it has not been possible for them to do so, due to paucity of funds. Therefore, I would suggest that if these schools were to be taken up by the Government, we would succeed in the programme of literacy. Actually it is at this tender age, that the child should learn so many things. Specially, I feel it is the age when the seed of good character is sown. I would like to teach the child civic sense and religion. I would say we can give an idea of secularism also because the child is so innocent that it accepts every other child and does not have any discrimination. At the same time, I feel that the Government should take up schools in towns and

cities also. 1 am glad to read that in 1971–72, 900 Nursery Schools were run and Government have been extending its aid to volunteer institutions. But, at the same time, I am sorry to say that some of these Sishu Vihars which are run privately, are sometimes not properly run. We only find there is this name of Sishu Vihar and somebody is making money out of it. If the Government can take over Nursery Schools and pay more attention to them, we would really be achieving progress. Regarding Primary Schools in towns and cities, I would suggest that we should have more buildings in surroundings where you can have playgrounds. It should be very hygienic, because the existing schools which have been there for ages together are having the most unhygienic condition, where the children do not have playgrounds and, I am sorry to say there are no lavatories provided. Hereafter, I feel that water facilities and latrines should be provided, because this is where we teach the child civic sense. It is an age when we can teach them civic sense, and secularism and we can also teach them what religion is.

I would say specially that the girls' education is more important because the health of the family —she being the pivot of the family— it revolves on her. It is she who has to teach the child what is good and what is bad. Her contribution does not lay only in the family but it is to the entire village or town and the country. And, as our beloved Prime Minister has observed, that contributon is towards the nation also. So, I think we should pay more attention to the education of girls which is rather neglected in rural areas.

Ragarding the schools in rural areas, I would say that a sum of Rupees thousand is given as grant by the Government, Rs. 500 – by the T. D. B. and Rs. 1,000—is the local contribution. In the present conditions—to cope up with the present needs and demands—, a sum of at least Rs. 4,000 would be required. So, I request the Government to enhance the grant. The Girls' Schools in villages should be given full grants. If it comes to the notice of the Government that there is no proper attendance, it is always stopped. I would request the officers concerned to see that more interesting things are brought into the schools to attract the girls. This would be helping girls' education.

We always find fault with the educational system and the teachers but at the same time, I would say it is a contract between the parents and the teachers and if parents came forward to suggest things and ideas to the Education Department, I feel that we can improve it a lot, because the present generation is much more intelligent and energetic than the older generation, and we have to find ways and means to keep them occupied. So, I would suggest that education without character is useless and dangerous. That is why we will have to find ways and means of seeing that the youth are kept engaged. I have just come to know that externally bound schools in the youth services are going to be started and I wish such schools are started at

(SMT. SUMATI BALACHANDRA MADIMAN)

divisional levels, so that the youth can be kept occupied and we can really take their help for the progress of our country.

I thank the Hon. Speaker for having given me an opportunity to speak a few words.

† ಶ್ರೀ ವಿಶ್ವನಾಥರೆಡ್ಡಿ (ಯಾದಗಿರಿ).—ಸನ್ಮಾನ್ಯ ಅಧ್ಯಕ್ಷರೇ, ವಿದ್ಯಾ ಇಲಾಖೆ ಬಗ್ಗೆ ಈ ಸ್ವಲ್ಪ ಸಮಯದಲ್ಲಿ ಮಾತನಾಡುವುದು ಕಠಿಣ. ನಮ್ಮ ಭಾಗದ ಮುಖ್ಯವಾದ ಬೇಡಿಕೆ ವಿಶ್ವವಿದ್ಯಾನಿಲಯ ಆಗಬೇಕು ಎನ್ನುವುದು. ಅದರ ಬಗ್ಗೆ ಸರ್ಕಾರ ಅಲಕ್ಷತಾಳಬಾರದು. ಅನೇಕ ವರ್ಷಗಳಿಂದ ಕೇಳುತ್ತಾ ಇದ್ದೇವೆ. ಆದರೆ ಆ ಪ್ರಕಾರ ಆಗದೆ ಗುಲ್ಬರ್ಗಾದಲ್ಲಿ ಆದಷ್ಟು ತ್ವರಿತವಾಗಿ 4ನೇ ವಿಶ್ವವಿದ್ಯಾನಿಲಯ ಆಗಬೇಕು. ಅನಂತರ ಬೇರೆ ಕಡೆ ವಿಚಾರ ಮಾಡಬೇಕು ಎನ್ನುವ ಮಾತನ್ನು ನಾನು ಈ ಸಮಯದಲ್ಲಿ ಹೇಳುತ್ತೇನೆ. ಈ ಶಾಲಾ ಅಧ್ಯಾಪಕರ ವರ್ಗಾವಣೆ ಬಗ್ಗೆ ಆಗತಕ್ಕ ಅನ್ಯಾಯವನ್ನು ಮಾನ್ಯ ವಿದ್ಯಾ ಮಂತ್ರಿಗಳಿಗೂ ಮತ್ತು ಮುಖ್ಯಮಂತ್ರಿಗಳಿಗೂ ಹೇಳಬೇಕೆಂದು ಈ ಸಮಯವನ್ನು ಉಪಯೋಗಮಾಡಿಕೊಳ್ಳುತ್ತಿದ್ದೇನೆ. ಅಧ್ಯಾಪಕರ ವರ್ಗಾವಣೆ ಯಾವಾಗಲೂ ಪಾಲಿಸಿ ಬೇಸಿಸ್ ಮೇಲೆ ಅಥವಾ ಅಡ್ಮಿನಿಸ್ಟ್ರೇಷನ್ ಬೇಸಿಸ್ ಮೇಲೆ ಮಾಡಬೇಕೇ ವಿನಃ ಬೇರೆ ಮತ್ತಾವುದೋ ಕಾರಣದಿಂದ ಆಗಬಾರದು. ಆಗ ನಮಗೆ ಯಾರು ಯಾವ ತರಹ ಅಬ್ಜೆಕ್ಷನ್ ಇರುವುದಿಲ್ಲ. ಆದರೆ ನಮ್ಮ ದುರದೃಷ್ಟವ ವಶಾತ್ ಹಿಂದಿನಿಂದ ಏನು ನಡೆಯುತ್ತಾ ಬಂದಿದೆಯೋ ಅದಕ್ಕಿಂತಲೂ ಆರ್ಬಿಟರರಿ ಆಗಿ ವರ್ಗಾವಣೆಗಳು ನಡೆಯುತ್ತಿವೆ.

10-30 A.M.

ವಿಶೇಷವಾಗಿ ನನ್ನ ಕ್ಷೇತ್ರದ ಬಗ್ಗೆ ಹೇಳುವುದಾದರೆ, ನನ್ನ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರ ಬಗ್ಗೆ ಯಾರಾದರು ಕಂಪ್ಲೈಂಟ್ ಕೊಟ್ಟರೆ ಅದನ್ನು ಮೊದಲು ವಿಚಾರ ಮಾಡಿಸಿ ಅದರಲ್ಲಿ ಏನಾದರು ಸತ್ಯಾಂಶ ಕಂಡುಬಂದರೆ ಬೇಕಾದರೆ ಶಿಕ್ಷೆ ಕೊಡಲಿ ಅಥವಾ ವರ್ಗ ಮಾಡಲಿ. ಆದರೆ ಇಂದು ಕಾಂಗ್ರೆಸ್‌ನವರು ಏನಾದರು ಕಂಪ್ಲೈಂಟ್ ಕೊಟ್ಟರೆ ಅದನ್ನು ವಿಚಾರಣೆ ಮಾಡದೆ ಒಮ್ಮಿಂದೊಮ್ಮೆಲೆ ವರ್ಗ ಮಾಡುವುದು ಸರಿಯಲ್ಲ. ಈ ರೀತಿ ಮಾಡುವುದು ಪ್ರಜಾಪ್ರಭುತ್ವಕ್ಕೆ ಕೊಡಲಿ ಹೊಡೆತ ಕೊಟ್ಟಂತಾಗುತ್ತದೆಂದು ಹೇಳುತ್ತೇನೆ. ಇದನ್ನು ಮಾನ್ಯ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಅರಿತುಕೊಳ್ಳಬೇಕೆಂದು ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿರುವ ಕಾಂಗ್ರೆಸ್‌ನ ಬ್ಲಾಕ್ ಪ್ರೆಸಿಡೆಂಟ್ ಅವರು ಇಂದು ಉಪಾಧ್ಯಾಯರ ವಿಚಾರದಲ್ಲಿ ರಾಜಕೀಯ ನಡೆಸುತ್ತಿದ್ದಾರೆ. ಅವರೇನಾದರು ಇಂತಹ ಉಪಾಧ್ಯಾಯರನ್ನು ವರ್ಗ ಮಾಡಿಸಿ ಎಂದು ವಿದ್ಯಾ ಮಂತ್ರಿಗಳಿಗೆ ಕಾಗದ ಬರೆದರೆ ಅದರ ಮೇಲೆ ಅವರು 'ಟೇಕ್ ಆಕ್ಷನ್' (take Action) ಎಂದು ಕೂಡಲೇ ಬರೆದುಬಿಡುತ್ತಾರೆ. ನಂತರ ಡೈರೆಕ್ಟರ್ ಅವರು ಸಹ ವಿಚಾರ ಮಾಡದೆ ವರ್ಗ ಮಾಡಿಬಿಡುತ್ತಾರೆ. ಇದು ಸರಿಯಲ್ಲ. ಯಾರು ತಪ್ಪು ಮಾಡುತ್ತಾರೋ, ಯಾರು ಬಹಳ ಕಾಲದಿಂದ ಒಂದೇ ಕಡೆ ಇದ್ದಾರೋ ಅಂತಹವರನ್ನು ವರ್ಗ ಮಾಡಿದರೆ ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ತಪ್ಪು ಮಾಡದವರನ್ನು ಸಹ ಯಾರೋ ಕಂಪ್ಲೈಂಟ್ ಕೊಟ್ಟರು ಎಂದು ವರ್ಗ ಮಾಡುವುದು ಸರಿಯಲ್ಲ. ಈ ರೀತಿ ಮಾಡುವುದು ತೀರಾ ಅನ್ಯಾಯವಾಗುತ್ತದೆಯಲ್ಲದೆ ಸರ್ಕಾರದ ಬುನಾದಿಗೇ ಹೊಡೆತ ಕೊಡುತ್ತದೆಂದು ಹೇಳುತ್ತೇನೆ. ಮೇ ತಿಂಗಳಲ್ಲಿ ಒಂದು ಕಂಪ್ಲೈಂಟ್ ವಿದ್ಯಾಮಂತ್ರಿಗಳಿಗೆ ಬಂತು. ಅದರ ಮೇಲೆ 'ಟೇಕ್ ಆಕ್ಷನ್' ಎಂದು ವಿದ್ಯಾಮಂತ್ರಿಗಳು ಬರೆದರು. ಜೂನ್ 16ನೇ ತಾರೀಖು ಕಂಪ್ಲೈಂಟ್‌ನಲ್ಲಿದ್ದ ಉಪಾಧ್ಯಾಯರನ್ನು ತನಿಖೆ ಮಾಡದೆ ಡೈರೆಕ್ಟರ್ ಅವರು ವರ್ಗ ಮಾಡಿದರು. ಅವರನ್ನು ವರ್ಗ ಮಾಡಿದ್ದು ಅನ್‌ರೀಜನಬಲ್ ಇದೆ ಎಂಬುದಾಗಿ ನಾನು ಕೂಡಲೇ ವಿದ್ಯಾಮಂತ್ರಿಗಳಿಗೆ ಮತ್ತು ಡೈರೆಕ್ಟರ್‌ಗೆ ಎಕ್ಸ್‌ಪ್ರೆಸ್ ಟೆಲಿಗ್ರಾಮ್ ಕೊಟ್ಟೆ. ವರ್ಗ ಮಾಡುವುದಕ್ಕೆ ಮೊದಲು ತನಿಖೆಯಾಗಬೇಕೆಂದು ನಂತರ ವಿವರವಾಗಿ ಕಾಗದಗಳನ್ನು ಸಹ ಇಬ್ಬರಿಗೂ ಬರೆದೆ. 19ನೇ ತಾರೀಖು ನಾನು ವಿದ್ಯಾ ಮಂತ್ರಿಗಳನ್ನು ಇದೇ ವಿಚಾರದ ಬಗ್ಗೆ ಭೇಟಿ ಮಾಡಿ ತಿಳಿಸಿದಾಗ ಅವರು ಬೇರೆ ಕಾಗದ ಬರೆದುಕೊಡಿ ವಿಚಾರ ಮಾಡಿಸುತ್ತೇನೆ ಎಂದು ಹೇಳಿದರು. 20ನೇ ತಾರೀಖು ಮತ್ತೆ ಭೇಟಿ ಮಾಡಿದಾಗ ವಿದ್ಯಾಮಂತ್ರಿಗಳು ಅದು ವಿಚಾರಣೆಯಾಗುವವರೆಗೆ ಅಬೇಯನ್ಸ್‌ನಲ್ಲಿ ಇಡುತ್ತೇನೆ ಎಂದು ಹೇಳಿದಾಗ ನಾನು ಕೂಡಲೇ ವಿಚಾರಣೆ ಮಾಡಿಸಬೇಕೆಂದು ಹೇಳಿದೆ. ಅವರು ಡೈರೆಕ್ಟರ್ ಅವರ ಹತ್ತಿರ ಮಾತನಾಡುತ್ತೇನೆಂದು

ಹೇಳಿದರು. ನಾನು ಸಹ ಡೈರೆಕ್ಟರ್ ಅವರನ್ನು ಮಾತಾಡಿ 16-18 ರೂಪಾಯಿಗಳನ್ನು ಖರ್ಚು ಮಾಡಿ ಟೆಲಿಗ್ರಾಮ್ ಕಳಿಸಿದ ವಿಚಾರವನ್ನು ಅವರಿಗೆ ತಿಳಿಸಿದಾಗ, ಅವರು ಟೆಲಿಗ್ರಾಮ್ ವಿಚಾರ ನನಗೆ ಗೊತ್ತಿಲ್ಲ, ನಾನು ನೋಡಲಿಲ್ಲವೆಂದು ಹೇಳಿದರು.

Sri A. R. BADARINARAYANA.—If the Hon'ble Member would yield, transfers are made not on the basis of complaints. Government has laid down its policy that teachers who are in their own taluks and teachers who have been staying for more than six years in the same place should be transferred on a phased basis. On that basis, it has been done. To say that it has been done on the complaint of this man or that man is not correct.

ಶ್ರೀ ವಿಶ್ವನಾಥರೆಡ್ಡಿ.—ಮಾನ್ಯ ಮಂತ್ರಿಗಳು ಈ ಮಾತನ್ನು ಹೇಳುತ್ತಿದ್ದಾರೆ. ಬೇಕಾದರೆ ಕಾಗದಪತ್ರಗಳನ್ನು ತರಿಸಿಕೊಂಡು ನೋಡಲಿ, ನನ್ನ ಸಮ್ಮುಖದಲ್ಲಿ ವಿಚಾರಣೆ ಮಾಡಲಿ ಆಗ ಯಾಗ ಯಾವುದು ಸರಿ ಯಾವುದು ಸರಿಯಿಲ್ಲ ಎಂಬುದು ಗೊತ್ತಾಗುತ್ತದೆ. 6 ವರ್ಷದಿಂದ ಹೆಚ್ಚಿಗೆ ಸರ್ವಿಸ್ ಆಗಿರುವವರು ಒಂದೇಕಡೆ ಇದ್ದಾರೆ. ಅಂತಹವರನ್ನು ಬಿಟ್ಟು ಒಂದೆರಡು ವರ್ಷ ಸರ್ವಿಸ್ ಆದವರನ್ನು ಬೇರೆ ಕಡೆಗೆ ವರ್ಗ ಮಾಡಿದ್ದಾರೆ. ಯಾರು ವಿರೋಧ ಪಕ್ಷದ ಸದಸ್ಯರಿದ್ದಾರೆ, ಅಂತಹವರ ಬಂಧು ಬಳಗದವರನ್ನು ಮತ್ತು ಅಂತಹವರ ಸ್ನೇಹಿತರನ್ನು ಸಂಬಂಧಿಕರನ್ನು ವರ್ಗ ಮಾಡಿದ್ದಾರೆ.

Sri A. R. BADARINARAYANA.—It is far from truth.

ಶ್ರೀ ವಿಶ್ವನಾಥರೆಡ್ಡಿ.—ಕಾಗದ ತರಿಸಿಕೊಂಡು ನೋಡಿದರೆ ಗೊತ್ತಾಗುತ್ತದೆ. 20ನೇ ತಾರೀಖು ಮಾನ್ಯ ಮಂತ್ರಿಗಳನ್ನು ನೋಡಿದಾಗ ಅವರು ಕಾಗದವನ್ನು ನೋಡಿಲ್ಲವೆಂದು ಹೇಳಿದರು. ಮರುದಿವಸ ನೋಡುತ್ತೇನೆಂದು ಹೇಳಿದರು. ಮರುದಿವಸ ಅವರನ್ನು ನೋಡಿದಾಗ, ನಾನು ಡೈರೆಕ್ಟರ್ ಅವರಿಗೆ ಹೇಳಿದ್ದೇನೆ, ಅವರನ್ನು ಹೋಗಿ ನೋಡಿ ಎಂದು ಹೇಳಿದರು, ನಂತರ ನಾನು ಡೈರೆಕ್ಟರ್ ಅವರಿಗೆ ಫೋನ್ ಮಾಡಿದ್ದಾಗ ಅವರು ಮಂತ್ರಿಗಳ ಹತ್ತಿರ ಡಿಸ್‌ಕಷನ್ ಮಾಡಿದೆ, ಅವರ ಬಗ್ಗೆ ಆರ್ಡರ್ ಇಷ್ಯೂ ಮಾಡುತ್ತಿದ್ದೇನೆಂದು ಹೇಳಿದರು. ಯಾರಾದರು ಕಂಪ್ಲೈಂಟ್ ಕೊಟ್ಟರೆ ಅದರ ಬಗ್ಗೆ ಎನ್‌ಕ್ವೈರಿ ಮಾಡಿ ಅದರಲ್ಲಿ ಏನಾದರು ತಪ್ಪಿದ್ದರೆ ಶಿಕ್ಷೆ ಅಥವಾ ವರ್ಗ ಮಾಡಬೇಕೇ ಹೊರತು ಯಾರೋ ಹೇಳಿದರು ಎಂದು ಕೂಡಲೇ ವರ್ಗ ಮಾಡುವುದು ಸರಿಯಿಲ್ಲ.

Sri A. R. BADARINARAYANA.—Sir, In regard to these transfers, it becomes impossible for the administration to go on if people begin to interfere in transfers. No administration can run at this rate.

Sri VISWANATHA REDDY.—I submit to the Hon'ble Minister that it is not that we have interfered but it is on the Verdict of the Congress people that you are making these transfers. ನಾವೇನು ಉಪಾಧ್ಯಾಯ ವರ್ಗಾವಣೆ ವಿಷಯದಲ್ಲಿ ಇನ್‌ಟರ್‌ಫಿಯರ್ ಮಾಡುತ್ತಿಲ್ಲ. ನಂತರ ನಾನು ಜಾಯಿಂಟ್ ಡೈರೆಕ್ಟರಿಗೆ ಮತ್ತು ಡೆಪ್ಯುಟಿ ಡೈರೆಕ್ಟರಿಗೆ ಟೆಲಿಗ್ರಾಮ್ ಮಾಡಿದೆ : ಉಪಾಧ್ಯಾಯರುಗಳನ್ನು ವರ್ಗ ಮಾಡುವುದಕ್ಕೆ ಮುಂಚೆ ಅವರ ಬಗ್ಗೆ ಇರುವ ಕಂಪ್ಲೈಂಟ್‌ನ್ನು ತನಿಖೆ ಮಾಡಬೇಕೆಂದು. ಆದರೆ ತನಿಖೆ ಮಾಡದೆ, ಕಾಂಗ್ರೆಸ್ ಪಕ್ಷದವರು represent ಮಾಡಿದ 4 ಜನ ಉಪಾಧ್ಯಾಯರನ್ನು ಬಿಟ್ಟು ಉಳಿದವರನ್ನು ವರ್ಗ ಮಾಡಿದರು. ಈ ರೀತಿ ಮಾಡಿದ್ದು ಸರಿಯಿಲ್ಲ. ಮತ್ತೊಮ್ಮೆ ಇದರ ಬಗ್ಗೆ ತನಿಖೆಯಾಗಬೇಕೆಂದು ಹೇಳುತ್ತೇನೆ. ಸರ್ಕಾರದವರು ತಮ್ಮ ತಪ್ಪನ್ನು ತಿದ್ದಿಕೊಳ್ಳದಿದ್ದರೆ ನಾವು ಅದರ ಬಗ್ಗೆ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಪ್ರಸಂಗ ಬಂದರೆ ಜೀವ ಕೊಟ್ಟಾದರೂ ಅನ್ಯಾಯವನ್ನು ದೂರ ಮಾಡಬೇಕಾಗುತ್ತದೆಂದು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ವಿದ್ಯಾ ಮಂತ್ರಿಗಳಿಗೆ ಹೇಳುತ್ತಿದ್ದೇನೆ. ನಾನು ಹೇಳತಕ್ಕಂಥ ವಿಚಾರ ಬಹಳ ಸೀರಿಯಸ್ ಇದೆ. ಪಾಲಿಸಿ ಬೇಸಿಸ್ ಮೇಲೆ ಬೇಕಾದರೆ ಉಪಾಧ್ಯಾಯರುಗಳಿಗೆ ಶಿಕ್ಷೆ ಕೊಡಿ ಅಥವಾ ವರ್ಗ ಮಾಡಿ, ಆದರೆ ವಿನಾಕಾರಣ ವರ್ಗ ಮಾಡುವುದು ತಪ್ಪು, ಆ ರೀತಿಯಾಗದಂತೆ ಸರ್ಕಾರದವರು ನೋಡಿಕೊಳ್ಳಬೇಕೆಂದು ಮತ್ತೊಮ್ಮೆ ಹೇಳಿ, ಈಗ ಆಗಿರತಕ್ಕಂತ ಅನ್ಯಾಯದ ಕಡೆಗೆ ಲಕ್ಷ ಕೊಟ್ಟು ಅದನ್ನು ಸರಿಪಡಿಸುತ್ತಾರೆಂದು ನಂಬಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† Sri S. M. YAHYA (Bhatkal).—Mr. Speaker Sir, In the Budget about 55 croress of rupees have been allotted to education. That is what I consider as a good investment, It is not mere spending, but investing for the future of the nation. Education is necessary for progress and without education we cannot develop our economy. Therefore, for progress for development and for national construction, we must spend more and more on education. It must be admitted that in India education does not receive the first place or the second place or even the third place in the order of priorities. Everyone professes to acknowledge the great value of education but due importance has not been fully to this vital subject. The basic and fundamental problem in our education system is that the teachers do not teach and the students do not learn, because we do not have efficient, qualified dedicated teachers. Many of our teachers are the rejects of the other professions and they take to teaching after disappointment and furstrat on in other spheres of life. Therefore, we cannot expect a high standard of education in India. When that is the plight of our teachers and when they are the rejects, how can our children be morally sound, how can our children be physically sound, how can our children be intellectually sound ? So, that is the basic problem. Many of our teachers are the rejects of the other professions and they take to teaching as a last resort. If at all we have to make any improvement, we have to make improvement in the conditions of our teachers.

Education is not merely imparting knowledge, not merely giving information. Education should develop the character of our children. Education should instil in the minds of our children the spirit of enquiry and science. The present day educational system and the present lot of teachers cannot instil a spirit of enquiry in the minds of our children. Therefore, Mr. Deputy Speaker, it is necessary that we must consider the plight of our teachers. They are very poorly paid. Unless we make the teaching profession an attractive profession, we will not get efficient teachers, we will not get dedicated teachers, we will not get merited teachers. In Russia the teachers are the highest paid. In the Western countries their service conditions are exceptionally good. But in India their plight is bad Therefore we must improve the lot of our teachers; we must give them the basic necessaries ; we must give them good salaries ; we must improve their service conditions.

We see student unrest in India. We say that the students and our youth behave badly. There is anti-social tendency among our students and youth. But we cannot hold the students and the youth responsible for student unrest and misbehaviour. If at all anybody can be blamed, that would be our teachers and our educationists because teachers do not know how to teach ; they do not know what to teach. And, therefore, we cannot blame our students for restlessness, for indiscipline and for misbehaviour.

Since Independence, there has been great expansion, tremendous expansion in the field of education. And, therefore, we find there are

changes in social, economic and political fields. About 80 years ago Rabindranath Tagore pointed out that social, economic and political backwardness of India was due to the fact that there was no contact between education and life. There is no relation between education and life. Now there are social, political and economic changes. But we have not changed our educational policies. We have not changed the political, social and economic conditions. Unless there is contact between life and education, such education will be meaningless.

Therefore, the nation has accepted certain policies and principles. The nation has accepted the principle of socialism, the principle of democracy and the principle of secularism. Why can't we teach democracy, socialism and secularism at all stages to our students? Unless we do that there cannot be a proper vision; there cannot be a proper change. So, at all stages we must teach the accepted national principles. There may be a few Diehards here and there who do not believe in socialism, democracy or secularism. But the nation as a whole and the public in general believe in these principles of socialism, democracy and secialism. Therefore, we need not bother about them and hesitate to include those great principles in our curriculum.

Unless we make a thorough change, a revolutinary change in our pattern of education and in our text-books, we will not be able to help our children. Therefore, the text-books must be changed. Can we go on teaching outdated ideas? Can we go on continuing the old, wrong and distorted interpretation given by the English historians who wanted to bring communal disharmony in India? So, there must be thorough and revolutionary change in our text-books.

India is a poor country and thousands of our illiterate brethren, especially in rural areas, lack equal opportunity. What sort of equal opportunity exists when we cannot give education to thousands of our children? The very concept of equal opportunity is meaningless unless equal facilities for education are given to every child in India. Therefore I suggest that compulsory and free education should be given to all the children. It should be the policy of the Government to provide good educational facilities in rural areas, and in all villages. In many of our villages in North Kanara there may be very few students but still equal opportunity and equal facilities should be given to our children there. For want of equal opportunity if the people are illiterate or are not sufficiently educated, how can they compete with others? Therefore, the concept of equality of opportunity has no meaning unless we give all the facilities to the people, especially the poor people.

Further as I quoted earlier, Tagore pointed out that there must be relation between life and education. Then only we can remove backwardness. Now, there is no such relation and contact between life and education. The present system of education is not job-oriented; nor is it based on the change of circumstances; nor have we developed

(SRI S. M. YAHYA)

our science and technology. We must give our thoughts to the national policy of our education. The entire pattern should be changed.

Therefore, my submission is that free and compulsory education should be given to all up to the age of 16. Facilities should be provided to all for education, especially in rural areas even if the strength is less.

Now I want to say a word about private and public schools. We know there are public schools which are very bad. There are also private schools which are very bad. But we cannot also say that the private schools are wholly bad; neither can we say that all the Government and public schools are bad. There are bad schools in the private sector as well as in public sector. Whether it is a Government school or a public school, if it is bad and if it is not up to the standard, then mercilessly such schools must be dealt with. These commercialised schools cannot go on merrily unbridled; they should be dealt with according to law. But, at the same time, we must not demoralise well-managed private schools. The private schools have made a great contribution; they have, in a great sense, helped national reconstruction also. Therefore, we must encourage only good schools whether private or public.

Unless there is relation between old thinking and the new thinking and unless we fuse old thinking with the new thinking, we cannot progress. Education can be realistic only when we fuse old thinking with new thinking. Then education can be a powerful force and can bring about a tremendous change in our country.

With these few words, I thank you and I wholeheartedly support the Demand on Education.

† Sri DIGAMBAR RAO BALWANT RAO (Afzalpur).—Mr. Deputy Speaker, Sir, I am very glad that one-fifth of the total budget of our State is allotted for Education. It is a good sign that we have given more importance to Education, but the working of the Education Department is not up to the mark. Today we are having the same old educational system wherein we are manufacturing clerks; we are having the same old pattern wherein we are producing people who are not capable of depending on themselves! They have to beg for service and have to wander from place to place and from office to office in search of service! That slavish mentality is still there. That is a product of our educational system. So many commissions like the Kothari Commission have been appointed and they all have said that we must have some social objectives and that educational pattern must be oriented in such a way that it can create self-sufficient citizens. Today we find that most of the people who take education are unfit when they enter life; they are not at all capable of taking to any avocation independently. We have been saying time and again that there

should be diversified courses in the country so that a man who passes the Matriculation will be in a position to take up some work independently but in effect what we find is that there are no such diversified courses open to them ; there may be some exceptions. What I feel is that the educational system should be changed so as to be true to our life, so as to create citizens who will be able to take to professions independently. Today there are about 3 lakhs of employees in the State service or services connected with the State. Every year about 2 lakhs are coming out after passing the S.S.L.C. examination. Similarly, so many graduates are coming out of the colleges every year. There is a rush of these people who are coming out of the schools and colleges and they are all clamouring for service. The question is how to accommodate them. For that we must have a plan which will be in consonance with our social objectives. For example, in China and Russia they have got a national goal, namely, communism So, they have oriented their educational policy in such a way that they can give a definite number of people for definite professions. So, they have got a plan whereas we have got no such plan. So, planning must be there to usher in our ideal of democratic socialism in this country. But the question is whether the necessary mental climate is created for that, and whether the officers that we have got and the people who are serving in different capacities either in business or in other walks of life are imbued with these ideals. I regret to say that that atmosphere is not created ; nor is the present day education helping in that direction. When you have got a national goal, the whole ducational system should be re-oriented to suit that goal. Plato has said that education is the edifice of democracy. It is on the basis of education that you have to build the new structure of socialistic society in this country. In spite of so many reports coming out, I fail to understand how you have not made a departure from the conventional thinking and convential education. The children that are coming out of the schools are good for nothing. They have not got that dash, originality and push which will enable them to be free citizens who can stand on their own legs. So, today there is not that atmosphere, nor is serious attempt made to bring about that atmosphere.

I am very sorry to say that in the Education Department we find officers who have got local and regional bias. Take for instance the Inter-State Seniority List. What has happened to the Hyderabad Karntak area in this matter ? The teachers have gone in appeal to the Supreme Court. They have worked as Class II officers for 10-15 years and in the tentative Inter-State Seniority list which was correctly prepared they were given their proper places. But that list was again changed and the changed list in which the under serving people were brought up was finalised. This happened because there was a Minister representing a particular area and he had a bias for that region. I may say that most of the cases that have come up before the courts are the result of insincerity, dishonesty and regional bias shown by the

(SRI DIGAMBAR RAO BALWANT RAO)

officers of the Education Department. So, I urge upon the Government that such officers must be brought to book. That is why I say that with this officialdom you cannot improve the situation. We want officers of integrity and honesty. Today we talk of national integration or emotional integration. I want to ask, where is emotional integration ? We want that justice should be meted out to everybody and with this object in view the deparatment should take a fresh look.

Coming to the State Librarian, there are fifty libraries in Bangalore out of which 22 libraries are bogus. I can give a list of the bugus libraries. These libraries are given Rs. 3,000 each and they are there only in name. The reason is that there is coullusion between the officer and these libraries.

Mr. DEPUTY SPEAKER.—I would request the hon. Member to be very brief and conclude his spech. The difficulty is that the list is so lengthy that it becomes very difficult to accommodate all the hon. Members who want to participate in the debate. The present list is bigger than the original list. I therefore want the kind assistance and co-operation of all the hon. Members so that I can help several members to participate in the debate,

Sri DIGAMBAR RAO BALWANT RAO.—I am passing on this list to the Hon. Minister so that he may make enquiries into it and see whether they are bogus libraries.

Next I want to come to the important point and that is, we want an University for Hyderabad Karnatak including Bellary. There is already post graduate course there and the University Grants Commission has stated that if there are 30 colleges, there must be one University. I have no objection if the Government wants to have one more University for Malnad. I welcome it. As a matter of fact Hyderabad Karnatak has got 100 colleges and therefore I request the Government to consider establishing a University for Hyderabad Karnatk on a priority basis.

11-00 A.M.

I wish to state in this connection that there are schools which have no furniture and no teachers. Inspite of so much amount being spent there are these shortages in our area. I would request the Minister who has great interest in education to try his best and look into these things.

With these words I thank the Chair and close my speech.

ಶ್ರೀ ಸಿ. ಬೈರೇಗೌಡ (ವೇಮಗಲ್).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿದ್ಯಾಮಂತ್ರಿಗಳು ಸುಮಾರು 60 ಕೋಟಿ ರೂಪಾಯಿಗಳ ಬೇಡಿಕೆಯನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಈ ಬೇಡಿಕೆ ಬಗ್ಗೆ ನಮ್ಮ ಅಭಿಪ್ರಾಯವನ್ನು ತಿಳಿಸುವುದಕ್ಕೆ ಮೊದಲು ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ನಾನು ಇಚ್ಛಿಸುತ್ತೇನೆ.

ಮೊಟ್ಟಮೊದಲನೆಯದಾಗಿ ಈ ಸಭೆಗೆ ಆರಿಸಿ ಬಂದಿರತಕ್ಕ ಶೇಕಡ 90 ರಷ್ಟು ಜನ ಗ್ರಾಮಾಂತರ ಪ್ರದೇಶಗಳಿಂದ ಬಂದಿರುವವರು. ಆದ್ದರಿಂದ ಗ್ರಾಮಾಂತರ ಪ್ರದೇಶ ಗಳಲ್ಲಿರತಕ್ಕ ವಿದ್ಯಾರ್ಥಿಗಳು ಮತ್ತು ಮಕ್ಕಳ ವಿದ್ಯಾಭ್ಯಾಸ ಅತಿ ಮುಖ್ಯವಾದುದು. ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಶಾಲೆಗಳನ್ನು ಈಗ ಹೋಗಿ ನೋಡಿದ್ದೇ ಆದರೆ ಒಂದು ದನದ ದೊಡ್ಡಿಯಾದರೂ ಮೇಲು ಎಂದು ಕಾಣಿಸುತ್ತದೆ. ಮೊದಲು ಸರ್ಕಾರದವರು ಪ್ರಾಥಮಿಕ ಶಾಲಾ ಕಟ್ಟಡಗಳನ್ನು ಕಟ್ಟಲು ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದರು. ಈಗ ಅದನ್ನು ಎರಡು ಸಾವಿರ ರೂಪಾಯಿಗಳಿಗೇರಿಸಿದ್ದಾರೆ. ಈ ವರ್ಷ ಇಂಟರ್‌ನ್ಯಾಷನಲ್ ಇಯರ್ ಮತ್ತು ಗಾಂಧಿ ಸೆಂಟೆನರಿ ಇಯರ್ ಎಂದು ಎರಡು ಸಾವಿರ ರೂಪಾಯಿಗಳಿಗೆ ಅದನ್ನು ಏರಿಸಿದ್ದಾರೆ. ಈ ಎರಡು ಸಾವಿರ ರೂಪಾಯಿಗಳಲ್ಲಿ ನಾಲ್ಕೈದು ಸಾವಿರ ರೂಪಾಯಿಗಳ ಕಟ್ಟಡವನ್ನು ಕಟ್ಟುವುದಕ್ಕೆ ಹೇಗೆ ಸಾಧ್ಯ? ಪಂಚಾಯತಿಗಳಿಂದ, ತಾಲ್ಲೂಕು ಬೋರ್ಡ್‌ಗಳಿಂದ ಮತ್ತು ಗ್ರಾಮಸ್ಥರಿಂದ ಉಳಿದ ಹಣ ವಸೂಲುಮಾಡಿ ಎಂದು ಹೇಳುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುವ ಪರಿಸ್ಥಿತಿ ಇನ್ನೂ ಬಂದಿಲ್ಲ. ಬೆಂಗಳೂರು ನಂತಹ ನಗರಗಳಲ್ಲಿ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟಿ ಹೆಚ್ಚಿನ ಅವಕಾಶವನ್ನು ಕೊಡುತ್ತಾ ಇರತಕ್ಕ ಪರಿಸ್ಥಿತಿ ಇರುವಾಗ ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಶುದ್ಧವಾದ ಒಳ್ಳೆಯ ಕಟ್ಟಡವನ್ನು ಕಟ್ಟುವುದಕ್ಕೆ ಅನೇಕ ಸಂದರ್ಭಗಳಲ್ಲಿ ಸರ್ಕಾರದ ವತಿಯಿಂದಲೇ ಅಡಚಣೆಗಳು. ಭಿಕ್ಷೆ ಬೇಡುವುದು ಖಂಡಿತವಾಗಿ ನಾಚಿಕೆಗೇಡಿನ ಪ್ರಸಂಗ ಏಕೆಂದರೆ, ವಿದ್ಯಾಭ್ಯಾಸ ಅತಿ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಚೆನ್ನಾಗಿ ನಡೆಯಬೇಕಾದರೆ, ಅಲ್ಲಿ ಶುದ್ಧವಾದ ವಾತಾವರಣ ಹಾಗೂ ಶುದ್ಧವಾದ ಮನಸ್ಸು ಇರಬೇಕು. ಅಂತಹ ವಾತಾವರಣವನ್ನು ಸರ್ಕಾರ ಕಲ್ಪಿಸುತ್ತಾ ಇಲ್ಲ. ಗ್ರಾಮಾಂತರ ಪ್ರದೇಶ ಗಳಲ್ಲಿರತಕ್ಕ ಮಕ್ಕಳ ಪರಿಸ್ಥಿತಿ ಏನು, ಅವರ ಆರೋಗ್ಯ ಪರಿಸ್ಥಿತಿ ಏನಾದರೂ ಸುಧಾರಿಸಿದೆಯೋ ಎಂದು ಹೇಳುವುದಾದರೆ, ಅದರಲ್ಲಿ ಏನೂ ಅಭಿವೃದ್ಧಿಯಾಗಿಲ್ಲ. ಬೆಂಗಳೂರಿನಲ್ಲಿ ಶಾಲಾಮಕ್ಕಳು ಓಡಾಡುತ್ತಿರತಕ್ಕದ್ದನ್ನು ನೋಡಿದರೆ, ನನಗೆ ಬಹಳ ಸಂತೋಷವಾಗುತ್ತದೆ. ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಗಳಿಗೆ ಬರತಕ್ಕ ಮಕ್ಕಳ ಸ್ಥಿತಿ ನೋಡಿದರೆ ಕಣ್ಣೀರು ಸುರಿಸಬೇಕಾಗುತ್ತದೆ. ಈ ವಿಷಯವನ್ನು ಸರ್ಕಾರದವರು ತೀವ್ರವಾಗಿ ಗಮನಿಸಬೇಕು. ನಮ್ಮ ವಿದ್ಯಾಭ್ಯಾಸ ಪದ್ಧತಿ ಏನಾಗಿದೆಯೆಂದರೆ, ಮೊದಲಿನಿಂದಲೂ ಪಾಶ್ಚಿಮಾತ್ಯದೇಶಗಳನ್ನೇ ಅನುಕರಣೆ ಮಾಡುತ್ತಿದ್ದಾರೆ. ಅಮೇರಿಕಾ ದೇಶಗಳಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಪಡೆದಿರುವವರು, ಡಾಕ್ಟರೇಟ್ ಪದವಿ ಪಡೆದಿರು ವವರೂ ಸಹ ಈಗ ನಮ್ಮ ದೇಶದಲ್ಲಿ ಹಿಪ್ಪಿಗಳಾಗಿ ಬೀದಿಬೀದಿಯಲ್ಲಿ ಅಲೆದಾಡುತ್ತಿದ್ದಾರೆ. ಈಗಿನ ವಿದ್ಯಾಭ್ಯಾಸ ಪದ್ಧತಿಯಲ್ಲಿ ವಿಶೇಷವಾಗಿ ಡಿಫೆಕ್ಟಿವ್ ಸಿಸ್ಟಮ್ ಇರುವುದರಿಂದ, ಅದನ್ನು ಆಮೂಲಾಗ್ರ ಬದಲಾವಣೆ ಮಾಡಬೇಕು. ಆ ಡಿಫೆಕ್ಟಿವ್ ಸಿಸ್ಟಂ ಇರುವುದನ್ನು ಮೊದಲು ತಪ್ಪಿಸಬೇಕು ಹಾಗೂ ಸಮಾಜವಾದಿ ರಾಷ್ಟ್ರಗಳಲ್ಲಿರತಕ್ಕ ವಿದ್ಯಾಭ್ಯಾಸಪದ್ಧತಿಯನ್ನು ಅಂದರೆ ಚೈನಾ ಮತ್ತು ರಷ್ಯಾ ದೇಶಗಳಲ್ಲಿರತಕ್ಕ ವಿದ್ಯಾಭ್ಯಾಸ ಪದ್ಧತಿಯನ್ನು ನಮ್ಮ ದೇಶದಲ್ಲಿ ಜಾರಿಗೆ ತರಬೇಕು. ಇವತ್ತಿನ ಚೈನಾದಲ್ಲಿ ಒಂದು ಮಗು ಹುಟ್ಟಿದರೆ ಆ ಮಗುವಿನ ಪೂರ್ಣ ವಿದ್ಯಾಭ್ಯಾಸ, ನಂತರ ಉದ್ಯೋಗಾ ವಕಾಶ ಇವೆರಡನ್ನು ಆ ಸರ್ಕಾರವೇ ಕೊಡತಕ್ಕ ಜವಾಬ್ದಾರಿಯನ್ನು ತೆಗೆದುಕೊಂಡು ಕೆಳಗಿನಿಂದ ಮೇಲ್ಮಟ್ಟದವರೆಗೂ ಅದಕ್ಕೆ ಬೇಕಾದ ಹಣದ ಸೌಲಭ್ಯವನ್ನೂ ಸಹ ಸರ್ಕಾರವೇ ವಹಿಸಿಕೊಳ್ಳುತ್ತದೆ. ದುರದೃಷ್ಟವಶಾತ್ ನಮ್ಮ ಗ್ರಾಮಾಂತರ ಪ್ರದೇಶದ ಮಕ್ಕಳನ್ನು ಕಂಡರೆ ನನಗಂತೂ ನಿಜವಾಗಿ ಕಣ್ಣೀರು ಬರುತ್ತದೆ. ಇಂತಹ ಒಂದು ಪರಿಸ್ಥಿತಿ ನಮ್ಮ ದೇಶದಲ್ಲಿದೆ.

Sri J. P. SARVESH.—A child born in China is the child of the country whereas here a child born is the child of the parents.

Sri H. S. SIDDAPPA.—On a point of order. Not only the Hon'ble Member is disturbing but even the Hon'ble Minister is seen engaged with the other member. How can this go on? Is this a Municipality?

Sri A. R. BADARINARAYANA.—I have been very attentive.

Mr. DEPUTY SPEAKER.—I have understood the point of order. When an Hon'ble Member is speaking, another Hon'ble Member may interrupt provided the interruption is not harsh. The Hon'ble Minister is supposed to have sufficient wisdom to discuss and do justice. So I hold there is no point of order.

ಶ್ರೀ ಸಿ. ಬೈರೇಗೌಡ.—ಇವತ್ತಿನದಿವಸ ನಮ್ಮ ರಾಜ್ಯದಲ್ಲಿ ಮೂರು—ನಾಲ್ಕು ವಿಶ್ವ ವಿದ್ಯಾನಿಲಯಗಳಿವೆ. ಆದರೆ ಇಂತಹ ವಿಶ್ವವಿದ್ಯಾನಿಲಯದಿಂದ ಹೊರಬಂದ ಒಬ್ಬನಿಗೆ ತನ್ನ ಉದರ ಪೋಷಣೆ ಮಾಡಿಕೊಳ್ಳುವುದಕ್ಕಾಗಿ ಒಂದು ಕೆಲಸ ಬೇಕೆಂದರೆ ಅದು ಸಿಗುತ್ತಾ ಇಲ್ಲ. ನಿರುದ್ಯೋಗದ ಹಾವಳಿಯೋ ಇತ್ತೀಚೆಗಂತೂ ಬಹಳ ಜಾಸ್ತಿಯಾಗಿದೆ. ಬಿ. ಎ., ಬಿ. ಇ., ಬಿ. ಎಸ್‌ಸಿ., ಎಂ.ಬಿ.ಬಿ.ಎಸ್. ಪದವೀಧರರು ಪ್ರತಿಯೊಬ್ಬ ಸದಸ್ಯರಲ್ಲಿಯೂ ಹತ್ತಾರುಸಾರಿ ಕೆಲಸಕ್ಕಾಗಿ ಬರುತ್ತಿರುವುದನ್ನು ಈ ಸಭೆಯ ಸದಸ್ಯರಿಗೆ ನಾನು ಬೇರೆ ಹೇಳಬೇಕಾಗಿಲ್ಲ. ಇದು ಎಲ್ಲರಿಗೂ ಗೊತ್ತಿದೆ. ಇಂತಹ ಪರಿಸ್ಥಿತಿ ನಮಗೇಕೆ ಒದಗಿದೆಯೋ ಗೊತ್ತಿಲ್ಲ. ಬಹು ಮುಖ್ಯವಾಗಿ ನಮ್ಮ ವಿದ್ಯಾಭ್ಯಾಸದಲ್ಲಿ ಇಲ್ಲಿಯವರೆಗೂ ಇರತಕ್ಕ ಪದ್ಧತಿ ಸರಿಯಿಲ್ಲ. ಅದರಿಂದ ಅಷ್ಟಾಗಿ ಅಭಿವೃದ್ಧಿಯೂ ಆಗಿಲ್ಲ. ಇದರಿಂದಲೇ ನಮ್ಮ ದೇಶದಲ್ಲಿ ಲಕ್ಷಾಂತರ ಹಾಗೂ ಕೋಟ್ಯಂತರ ಜನಗಳು ನಿರುದ್ಯೋಗಿ ಗಳಾಗಿದ್ದಾರೆ. ಅವರಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡುವ ಜವಾಬ್ದಾರಿ ಮಾನ್ಯ ವಿದ್ಯಾಮಂತ್ರಿಗಳ ಮೇಲೆ ಬಹಳವಾಗಿ ಇದೆ. ಇನ್ನು ಇಷ್ಟಾದ ಮೇಲೆ ನಮ್ಮ ಪುರಾತನ ಸಂಸ್ಕೃತಿ ಏನಿದೆ ಅದು ನಶಿಸಿ ಹೋಗುತ್ತಿದೆ. ಇತ್ತೀಚೆಗೆ ಸಿನೇಮಾ, ನಾಟಕ ಇತ್ಯಾದಿಗಳು ಬಂದ ಮೇಲೆ ನಮ್ಮ ಹಿಂದಿನ ಕಲೆಯಾದ ಜಾನಪದ, ನೃತ್ಯ, ಸಾಹಿತ್ಯ ಇತ್ಯಾದಿಗಳು ಮಾಯವಾಗುತ್ತಿವೆ. ಇವುಗಳನ್ನು ಸರ್ಕಾರದವರು ಪೋಷಿಸುವುದಕ್ಕೆ ಹಣವನ್ನು ಒದಗಿಸಬೇಕು. ಪುರಾತನ ಸಂಸ್ಕೃತಿಯನ್ನು ನಾವು ಕಳೆಯಬಾರದೆಂದು ಹೇಳುತ್ತೇನೆ.

ಇನ್ನು ನಮ್ಮ ಶಾಲಾ ಕಾಲೇಜುಗಳಲ್ಲಿರತಕ್ಕ ಯಾವ ಪಠ್ಯಪುಸ್ತಕಗಳನ್ನೇ ನೋಡಲಿ ಒಂದರಲ್ಲೂ ನಮ್ಮ ಸಮಾಜವಾದಕ್ಕೆ ಪುಷ್ಟಿ ಕೊಡತಕ್ಕಂಥ ವಿಷಯಗಳಿಲ್ಲ. ಸಮಾಜವಾದದ ಧುರೀಣರಾದಂಥ ಕಾರ್ಲ್ ಮಾರ್ಕ್ಸ್, ಲೆನಿನ್, ಲಾಸ್ಕಿ ಇತ್ಯಾದಿಯವರ ಜೀವನ ಚರಿತ್ರೆಗಳಿಲ್ಲ. ಹೀಗಾದರೆ ನಮ್ಮ ತರುಣರಿಗೆ ಸಮಾಜವಾದ ಹೇಗೆ ತಿಳಿಯುತ್ತದೆ? ಅವರಿಗೆ ಚಿಕ್ಕಂದಿನಲ್ಲೇ ಇಂಥ ವಿಷಯಗಳನ್ನು ಮನಸ್ಸಿಗೆ ಹಿಡಿಯುವಂತೆ ಮಾಡದಿದ್ದರೆ ಮುಂದೆ ಅವರು ಒಳ್ಳೆಯ ಸಮಾಜ ವಾದಿ ಗಳಾಗಲು ಹೇಗೆ ಸಾಧ್ಯ? ಆದ್ದರಿಂದ ಚಿಕ್ಕವಯಸ್ಸಿನಲ್ಲಿದ್ದಾಗಲೇ ದೇಶಾಭಿಮಾನ ಸಮಾಜವಾದದಲ್ಲಿ ಅಭಿಮಾನ ಅವರಲ್ಲಿ ಬೆಳೆಯುವಂತೆ ಮಾಡಬೇಕು.

ಇನ್ನು ಕೊನೆಯದಾಗಿ ಶಿವಮೊಗ್ಗಾ ಜಿಲ್ಲೆಯಲ್ಲಿ ಹುಟ್ಟಿ ತನ್ನ ಜೀವನವನ್ನೆಲ್ಲಾ ಸಮಾಜ ವಾದದ ಬೆಳವಣಿಗಾಗಿ ಮುಡುಪಾಗಿಟ್ಟಿದ್ದ ದಿವಂಗತ ಶ್ರೀ ಗೋಪಾಲಗೌಡರ ಹೆಸರಿನಲ್ಲಿ ಒಂದು ವಿಶ್ವ ವಿದ್ಯಾನಿಲಯವನ್ನು ಸ್ಥಾಪಿಸಬೇಕೆಂದು ನಾನು ಮಾನ್ಯ ವಿದ್ಯಾಸಚಿವರಲ್ಲಿ ವಿನಂತಿ ಮಾಡುತ್ತೇನೆ. ಮೇಲಾಗಿ ಅವರೂ ಕೂಡ ಶಿವಮೊಗ್ಗ ಜಿಲ್ಲೆಯವರೇ ಆಗಿರುವುದರಿಂದ ಅದನ್ನು ಕೂಡಲೆ ಮಾಡಬೇಕೆಂದೂ ಮತ್ತೊಮ್ಮೆ ಪ್ರಾರ್ಥಿಸಿ ಮಾನ್ಯಸಚಿವರು ದೇಶದಲ್ಲಿ ಸಮತಾವಾದ ಸಮಾಜವನ್ನು ಜಾರಿಗೆ ತರುವುದಾದರೆ ಅವರು ಕೇಳಿರತಕ್ಕ 60 ಕೋಟಿರೂಪಾಯಿ ಅಲ್ಲ ಅವರಿಗೆ ನಾವು ಒಂದು ಬ್ಲಾಂಕ್ ಚೆಕ್ಕನ್ನೇ ಕೊಡುವುದಕ್ಕೆ ಸಿದ್ಧರಾಗಿದ್ದೇವೆಂದು ಹೇಳಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಕಲ್ಪಿಸಿ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಶ್ರೀರಾಮುಲು (ಗಾಂಧೀನಗರ).—ಮಾನ್ಯ ಅಧ್ಯಕ್ಷರೇ, ವಿದ್ಯಾಸಚಿವರು ತಂದಿರ ತಕ್ಕ ಬೇಡಿಕೆಯನ್ನು ಒಪ್ಪುತ್ತಾ ಈ 6 ಕೋಟಿ ರೂಪಾಯಿಗಳು ಏನಿವೆ ಇದು ನಮ್ಮ ದೇಶದಲ್ಲಿರ ತಕ್ಕ ಮೂರು ಕೋಟಿ ಜನರಿಗೆ ಅನ್ವಯವಾಗುವ ಹಾಗೆ ಇದನ್ನು ವಿನಿಯೋಗ ಮಾಡತಕ್ಕ ಕ್ರಮದಲ್ಲಿ ಏನು ನ್ಯೂನತೆಗಳಿವೆ ಎಂಬುದನ್ನು ತಿಳಿಸುವುದಕ್ಕೆ ನಾನು ಒಂದೆರಡು ಉದಾಹರಣೆಗಳನ್ನು ಕೊಟ್ಟು ನನ್ನ ಮಾತುಗಳನ್ನು ಮುಗಿಸುತ್ತೇನೆ.

ನಾವು ದೇಶದಲ್ಲಿ ಸಮತಾವಾದ ಸಮಾಜವನ್ನು ಜಾರಿಗೆ ತರುತ್ತೇವೆ. ನಿಮಗೆ ಇನ್ನೂ ಏನೇನೋ ಅನುಕೂಲಗಳನ್ನು ಒದಗಿಸುತ್ತೇವೆಂದು ಜನತೆಗೆ ಆಸೆಗಳನ್ನು ಹುಟ್ಟಿಸಿ ಅವರ ಓಟು ಗಳನ್ನು ಪಡೆದು ಕಳೆದ 25 ವರ್ಷಗಳಿಂದ ನಾವು ರಾಜ್ಯವನ್ನು ಆಳುತ್ತಾ ಬಂದಿದ್ದೇವೆ. ನಾವು ಜನತೆಗೇನು ಆಶ್ವಾಸನೆಗಳನ್ನು ಕೊಟ್ಟು ಬಂದಿದ್ದೇವೋ ಅವುಗಳನ್ನು ಅಧಿಕಾರಕ್ಕೆ ಬಂದ ನಂತರ ಈಡೇರಿಸುತ್ತಾರೆಯೋ ಇಲ್ಲವೋ ಎಂಬುದನ್ನು ಜನತೆ ಬಹಳ ಕಾತುರತೆಯಿಂದ ಎದುರು ನೋಡುತ್ತಿದೆ. ಆದರೆ ನಮ್ಮ ಇಷ್ಟು ವರ್ಷಗಳ ಆಡಳಿತದಲ್ಲೂ ಜನಸಾಮಾನ್ಯರಿಗೆ ವಿದ್ಯಾಸೌಲಭ್ಯ ಕೆಲವರಿಗೆ ಏನೇನೂ ಲಭಿಸಿರುವುದಿಲ್ಲ ಎಂದು ತಿಳಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ಇದಕ್ಕೆ ಕಾರಣಗಳೂ ಇವೆ. ಮೊದಲನೆಯದಾಗಿ ರಾಜ್ಯಕ್ಕೆ ನಾವು ವಿದ್ಯಾ ಬಾಬಿಗೆ ಕೋಟಿಗಟ್ಟಲೆ ಹಣವನ್ನು ಖರ್ಚುಮಾಡುತ್ತಿರುವಾಗ ಸರ್ಕಾರದಲ್ಲಿ ಇದರ ಬಗ್ಗೆ ಏನಾದರೂ ಒಂದು ನಿರ್ದಿಷ್ಟವಾದ ಯೋಜನೆಯಿದೆಯೋ ಎಂದರೆ—ಪ್ರಶ್ನೆ ಮಾಡುವುದಕ್ಕೆ ಇಚ್ಛಿಸುತ್ತೇನೆ? ನಾವು 60 ಕೋಟಿ

ರೂಪಾಯಿಗಳನ್ನು ಈ ಬಾಬಿಗೆ ಖರ್ಚುಮಾಡುವಾಗ ಜನತೆಗೆ ಕಲಿಸತಕ್ಕ ವಿದ್ಯಾಭ್ಯಾಸದ ಬಗ್ಗೆ ಒಂದು ರೀತಿ ನೀತಿ ಇರುವುದು ಬೇಡವೇ ? ಇದಕ್ಕಾಗಿ ಒಂದು ನಿರ್ದಿಷ್ಟವಾದ ಯೋಜನೆ ಇರಬೇಡವೇ ? ಇದರ ಬಗ್ಗೆ ನನಗೆ ತುಂಬಾ ಸಂಶಯವಿದೆ. ಹಾಗೆ ಒಂದು ಯೋಜನೆ ಖಂಡಿತವಾಗೂ ಇದ್ದಿದ್ದರೆ ಎಲ್ಲಾ ಜನರಿಗೂ ವಿದ್ಯೆಯ ಸೌಲಭ್ಯ ಒಂದೇ ಸಮನಾಗಿ ದೊರೆಯಬೇಕಾಗಿತ್ತು. ಆದರೆ ಆ ರೀತಿ ದೊರೆಯುತ್ತಿಲ್ಲ. ಅದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಮಳವಳ್ಳಿ ತಾಲ್ಲೂಕಿನ ಒಟ್ಟು ಪ್ರಜಾಸಂಖ್ಯೆ ಒಂದೂಕಾಲು ಲಕ್ಷ. ಆದರೆ ಅಲ್ಲಿರತಕ್ಕ ವಿದ್ಯಾಸಂಸ್ಥೆಗಳು ಎಷ್ಟು ಎಂದರೆ 14 ಪ್ರೌಢಶಾಲೆಗಳು, 2 ಕಾಲೇಜುಗಳೂ ಮತ್ತು ನೂರಕ್ಕೆ ಮೇಲ್ಪಟ್ಟು ಇನ್ನಿತರೇ ಶಾಲೆಗಳು ಇರುತ್ತವೆ. ಸರ್ಕಾರ ಅಲ್ಲಿಗೆ ಅಷ್ಟು ವಿದ್ಯಾಸೌಕರ್ಯಗಳನ್ನು ಒದಗಿಸಿದೆ. ಆದರೆ ನನ್ನ ಕ್ಷೇತ್ರವಾದ ಗಾಂಧೀನಗರದಲ್ಲಿ ಇರತಕ್ಕ ಒಟ್ಟು ಪ್ರಜಾಸಂಖ್ಯೆ 2 ಲಕ್ಷ. ಆದಾಗ್ಯೂ ಅಲ್ಲಿ ಒಂದೂ ಕೂಡ ಸರ್ಕಾರಿ ಹೈಸ್ಕೂಲಿಲ್ಲ. ನನ್ನ ಕ್ಷೇತ್ರದಲ್ಲಿ ಇರತಕ್ಕ ಜನರಲ್ಲಿ ಶೇ. 60 ರಷ್ಟು ಹರಿಜನರಿದ್ದಾರೆ. ಅಲ್ಲಿ ಎರಡು ಲಕ್ಷ ಪ್ರಜಾಸಂಖ್ಯೆ ಇದೆ. ಆದರೆ ಅಲ್ಲಿರತಕ್ಕದ್ದು ಒಂದು ಹೆಣ್ಣುಮಕ್ಕಳ ಮಿಡಲ್ ಸ್ಕೂಲ್ ಮತ್ತು ಒಂದು ಗಂಡುಮಕ್ಕಳ ಮಿಡಲ್ ಸ್ಕೂಲ್—ಹೀಗೆ 2 ಮಿಡಲ್ ಸ್ಕೂಲುಗಳು ಮಾತ್ರ ಇರುತ್ತವೆ. ಅಂದರೆ ಇನ್ನು ಆ ಪ್ರದೇಶದ ಜನರ ವಿದ್ಯಾಭ್ಯಾಸ ಯಾವ ರೀತಿ ನಡೆದಿರಬೇಕು ಎನ್ನುವುದನ್ನು ಮಾನ್ಯ ಸಭೆಯವರೇ ಆಲೋಚಿಸಬೇಕು. ಹೀಗಿದ್ದರೂ ಕೆಲವರು ಇಲ್ಲಿ ವಿದ್ಯಾಭ್ಯಾಸ ಚೆನ್ನಾಗಿ ನಡೆದಿದೆ ಎಂದು ಹೇಳುತ್ತಾರೆ. ಹಾಗೆ ಅದು ನಡೆದಿದ್ದರೆ ಬೇರೆ ಕಡೆ ನಡೆದಿರಬಹುದು. ಆದರೆ ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ವಿಧಿಯಿಲ್ಲದೆ ಹೇಳಲೇಬೇಕಾಗಿದೆ. ನಾನು ಇದೇ ವಿಚಾರವನ್ನು ಕುರಿತು ನಮ್ಮ ವಿದ್ಯಾಸಚಿವರಿಗೆ ಕಳೆದ ಏಪ್ರಿಲ್ ತಿಂಗಳು 21 ರಲ್ಲಿ ಒಂದು ಪತ್ರವನ್ನು ಬರೆದೆ. ಅದಕ್ಕೆ ಅವರಿಂದ ಇಲ್ಲಿಯವರೆಗೂ ಯಾವ ಒಂದು ಉತ್ತರವೂ ಬರಲಿಲ್ಲ. ಅದೇನು ಕಾರಣವೋ ಅದೂ ಕೂಡ ಗೊತ್ತಾಗಲಿಲ್ಲ. ಅದಾದ ಮೇಲೆ ನಾನು ಮತ್ತೊಮ್ಮೆ ನಾನು ಮಾನ್ಯ ವಿದ್ಯಾಸಚಿವರನ್ನು ಕಂಡು ನನ್ನ ಕ್ಷೇತ್ರಕ್ಕೆ ತಾವು ಇಂಥ ದಿವಸ ಭೇಟಿ ಕೊಡಬೇಕೆಂದು ಕೇಳಿ ಕೊಂಡಿದ್ದೆ. ಅದಕ್ಕೆ ಅವರು ಮೊದಲು ಒಪ್ಪಿದ್ದರು. ಆದರೂ ಕಡೆಗೂ ಅವರು ನನ್ನ ಕ್ಷೇತ್ರಕ್ಕೆ ಬರಲಿಲ್ಲ. ಆದರೆ ರಾಜ್ಯದಲ್ಲಿ ವಿದ್ಯಾಭ್ಯಾಸಕ್ಕೆ ಈಗ ಸರ್ಕಾರ ಕೇಳುತ್ತಿರುವುದು 60 ಕೋಟಿ ರೂಪಾಯಿಗಳು, ರಾಜ್ಯದಲ್ಲಿರತಕ್ಕ ಒಟ್ಟು ಜನಸಂಖ್ಯೆ 3 ಕೋಟಿ ಅಂದರೆ ಪ್ರತಿಯೊಬ್ಬ ಪ್ರಜೆಯ ಮೇಲೂ 20 ರೂಪಾಯಿಗಳನ್ನು ಇದರ ಬಗ್ಗೆ ಹೇರಿದಂತೆ ಆಯಿತು. ಆದರೆ ಎಲ್ಲರಿಗೂ ಅನುಕೂಲ ಮಾಡಿ ಆ ನನ್ನ ಕ್ಷೇತ್ರದವರಿಗೆ ಮಾತ್ರ ಹಾಗೇ ಕೈಬಿಡಲು ಅವರು ಮಾಡಿದ ಪಾಪವಾದರೂ ಏನು ? ಅವರೇನು ಅಂಥ ಕರ್ಮ ಮಾಡಿದ್ದಾರೆ? ಅಲ್ಲಿಗೆ ಕಳೆದ 25 ವರ್ಷಗಳಿಂದಲೂ ಒಂದು ಸರ್ಕಾರಿ ಪ್ರೌಢಶಾಲೆಯನ್ನು ಏಕೆ ಒದಗಿಸಲಿಲ್ಲ? ಹಿಂದೆ ಏನೋ ಒಂದು ಶಾಪವಿತ್ತಂತೆ—ಒಂದು ಜಾತಿಯವರಿಗೇ ಮೀಸಲಾಗಿರತಕ್ಕ ವಿದ್ಯೆಯನ್ನು ಬೇರೆ ಜಾತಿಯವರು ಯಾರೂ ಕಲಿಯಬಾರದು ಎಂದು. ಅಂಥ ಒಂದು ಶಾಪ ಏನಾದರೂ ಇನ್ನೂ ಜಾರಿಯಲ್ಲಿ ನಮ್ಮ ಪ್ರದೇಶದಲ್ಲಿ ಇದೆಯೋ ಎಂಬುದಾಗಿ ನಾನು ಸರ್ಕಾರವನ್ನು ಕೇಳಬೇಕಾಗಿದೆ. ಇಲ್ಲಿ ನಾವು ಕುಳಿತುಕೊಂಡು ಆಡಳಿತ ಪಕ್ಷದವರು ವಿರೋಧ ಪಕ್ಷದವರನ್ನೂ, ವಿರೋಧ ಪಕ್ಷದವರು ಆಡಳಿತ ಪಕ್ಷದಲ್ಲಿರತಕ್ಕವರನ್ನೂ ಟೀಕೆ ಮಾಡುವುದರಲ್ಲೇ ನಮ್ಮ ಕಾಲವೆಲ್ಲಾ ಹರಣವಾಗುತ್ತಾ ಇದೆ. ನಾವು ಈ ದಿವಸ ಇಲ್ಲಿ ಒಪ್ಪಿಗೆ ಕೊಡತಕ್ಕ ಈ ಹಣ ಏನಿದೆ ಇದು ನಾಳೆ ಆ ಖಜಾನೆಗೆ ಹೋಗಿ ಬಿದ್ದಮೇಲೆ ಅಲ್ಲಿ ಅದನ್ನು ವಿನಿಯೋಗ ಮಾಡುವಾಗ ಅಲ್ಲಿ ಈ ಸಮಾಜವಾದವೂ ಬರುವುದಿಲ್ಲ, ಯಾವ ವಾದವೂ ಬರುವುದಿಲ್ಲ. ಅವರಿಗೆ ಮನಸ್ಸು ಬಂದ ರೀತಿಯಲ್ಲಿ ಅದನ್ನು ಖರ್ಚುಮಾಡುತ್ತಾರೆ. ಹಾಗಿಲ್ಲದೆ ಇಲ್ಲಿ ಬೇಕಾದಷ್ಟು ವಾದ ಮಾಡತಕ್ಕ ಆ ಸಮಾಜವಾದದ ವಾದವನ್ನೇ ಅನುಸರಿಸಿ ಹಣವನ್ನು ಖರ್ಚುಮಾಡುವುದಾಗಿದ್ದರೆ ಇಲ್ಲಿಯವರೆಗೂ ನನ್ನ ಕ್ಷೇತ್ರಕ್ಕೆ ಏಕೆ ಒಂದು ಸರ್ಕಾರಿ ಪ್ರೌಢಶಾಲೆ ಬರಲಿಲ್ಲ ? ಇಂಥಾದ್ದು ಖಂಡಿತ ಆಗಬಾರದು ಎಂದು ನಾನು ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಬಹಳ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅದಕ್ಕಾಗಿಯೇ ನಾನು ಮೊದಲೇ ಹೇಳಿದೆ ನಾವು ಇಲ್ಲಿ ಮಂಜೂರು ಮಾಡತಕ್ಕ ಹಣವನ್ನು ಖರ್ಚುಮಾಡತಕ್ಕ ಬಗ್ಗೆ ಸರ್ಕಾರದಲ್ಲಿ ಒಂದು ಯೋಜನೆ ಇರಬೇಕು. ಅಂಥ ಒಂದು ಯೋಜನೆಯನ್ನು ತಯಾರಿಸತಕ್ಕ ಕಾಲದಲ್ಲಿ ಯಾವ ಸ್ಥಳದಲ್ಲಿ ಎಷ್ಟೆಷ್ಟು ಪ್ರಾಥಮಿಕ ಶಾಲೆಗಳಿವೆ, ಮಾಧ್ಯಮಿಕ ಶಾಲೆಗಳಿವೆ, ಎಷ್ಟು ಪ್ರೌಢಶಾಲೆಗಳಿವೆ, ಎಷ್ಟು ಕಾಲೇಜುಗಳಿವೆ ಎಂಬುದನ್ನೆಲ್ಲ ಪರಿಶೀಲನೆ ಮಾಡಿ ನೋಡಿದರೆ ಎಲ್ಲಿ ಶಾಲೆಗಳಿವೆ ಎಲ್ಲಿ ಶಾಲೆಗಳಿಲ್ಲ ಎಂಬುದು ತಾನಾಗೇ ಗೊತ್ತಾಗುತ್ತದೆ. ಇಂಥ ಅವ್ಯವಸ್ಥೆಯನ್ನು ಇನ್ನಾದರೂ ಮುಂದುವರಿಸದೆ ನನ್ನ ಕ್ಷೇತ್ರಕ್ಕೆ ಒಂದು ಸರ್ಕಾರಿ ಪ್ರೌಢಶಾಲೆಯನ್ನು ಕೂಡಲೇ ಮಂಜೂರು ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗೆರೆ).—ಅಧ್ಯಕ್ಷರೇ, ವಿದ್ಯಾ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಬೇಡಿಕೆಯ ವಿಷಯದಲ್ಲಿ ನಾನು ಕೆಲವು ಮಾತುಗಳನ್ನು ಹೇಳಬೇಕಾಗಿದೆ. 'ಕೋಟಿ ವಿದ್ಯೆಗಿಂತ-ಮೇಟಿ ವಿದ್ಯೆ ಲೇಸು' ಎಂಬುದಾಗಿ ಸರ್ವಜ್ಞಮೂರ್ತಿ ಬಹಳ ಹಿಂದೆಯೇ ಹೇಳಿದ್ದಾನೆ. ನಾವು ಈ ದಿವಸ ಆ ಮೇಟಿ ವಿದ್ಯೆಯನ್ನು ಮರೆತು ಇನ್ನಾವುದೋ ವಿದ್ಯೆಗೆ ಕೋಟಿ ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆ. ಈ ದಿವಸ ನಾವೇನು ಇಷ್ಟು ಅಪಾರವಾಗಿ ಹಣವನ್ನು ಖರ್ಚುಮಾಡುತ್ತಿದ್ದೇವೆ ಈ ಒಂದು ವಿದ್ಯಾಭ್ಯಾಸಕ್ಕೆ—ಇದರಿಂದ ದೇಶಕ್ಕೆ ಮುಂದೆ ಖಂಡಿತ ಸುಖವಾಗುವುದಿಲ್ಲ, ಇದರಿಂದ ದೇಶದಲ್ಲಿ ಇನ್ನೂ ಹೆಚ್ಚಿನ ಅಶಾಂತಿ, ಅತೃಪ್ತಿ ಮೂಡುವುದಕ್ಕೆ ಅವಕಾಶವಾಗುತ್ತದೆ ಎಂಬುದನ್ನು ನಾವು ಇಂದೇ ಸೂಕ್ಷ್ಮವಾಗಿ ಕಾಣಬಹುದಾಗಿದೆ. ನಾವು ನಮ್ಮ ವಿದ್ಯಾಭ್ಯಾಸ ಕ್ರಮವನ್ನು ಬದಲಾಯಿಸದಿದ್ದರೆ ಬಹಳ ಕಷ್ಟಕ್ಕೆ ಗುರಿಯಾಗುತ್ತೇವೆ. ಈ ದಿವಸ ರಾಜ್ಯದಲ್ಲಿ ಯಾರಾದರೂ ಮುಂದೆ ಬಂದು ಒಂದು ನಾಕ್ಸಲೈಟೀಸ್ ಆರ್ಗನೈಜೇಷನ್ ಮಾಡುತ್ತೇವೆ ಎಂದರೆ ಅದಕ್ಕೆ ಮೊದಲು ಬಂದು ಸೇರತಕ್ಕವರು ಯಾರೆಂದರೆ ನಮ್ಮಲ್ಲಿರತಕ್ಕ ವಿದ್ಯಾವಂತ ನಿರುದ್ಯೋಗಿಗಳಾಗಿರತಕ್ಕ ಜನರು. ಆದುದರಿಂದ ನಾವು ಇನ್ನಾದರೂ ಎಚ್ಚೆತ್ತು ಕೊಳ್ಳದಿದ್ದರೆ ತೊಂದರೆ ತಪ್ಪಿದ್ದಲ್ಲ. ನಾವು ಕೂಡಲೆ ನಮ್ಮ ಇಂದಿನ ವಿದ್ಯಾಭ್ಯಾಸ ಕ್ರಮವನ್ನು ಬದಲಾಯಿಸಿ ರಾಜ್ಯಾದ್ಯಂತವೂ ವ್ಯವಸಾಯದ ಸ್ಕೂಲು-ವ್ಯವಸಾಯದ ಕಾಲೇಜ್ ಮತ್ತು ತಾಂತ್ರಿಕ ಶಿಕ್ಷಣ ಶಾಲೆಗಳನ್ನು ತೆರೆಯುವುದಕ್ಕೆ ಪ್ರಯತ್ನ ಮಾಡಬೇಕು. ಇಲ್ಲವಾದರೆ ನಮ್ಮಲ್ಲಿರತಕ್ಕ ಈ ನಿರುದ್ಯೋಗ ಪರಿಹಾರವಾಗುವುದಿಲ್ಲ. ವಿದ್ಯಾರ್ಥಿಗಳು ವಿದ್ಯಾವಂತರಾಗಿ ಶಾಲೆಗಳಿಂದ ಹೊರಗೆ ಬಂದ ತಕ್ಷಣ ಉದ್ಯೋಗವನ್ನು ಹುಡುಕುವರು. ಆದರೆ ಅದು ದೊರೆಯು ವುದು ಈಗ ಕಷ್ಟವಾಗಿದೆ. ಆದುದರಿಂದ ತಾಂತ್ರಿಕ ಶಿಕ್ಷಣ ಕೊಡುವುದು ಒಳ್ಳೆಯದು. ಅದನ್ನು ಪಡೆದರೆ ಮೋಟಾರು ವಾಹನಗಳಿಗೆ ಸಂಬಂಧಪಟ್ಟಂತೆ ಅಥವಾ ಕಾರ್ಖಾನೆಗಳಿಗೆ ಸಂಬಂಧಪಟ್ಟಂತೆ ಇರುವ ಕೆಲಸಗಳಲ್ಲಿ ತೊಡಗಿ ಸುಲಭವಾಗಿ ಜೀವನ ಮಾಡಬಹುದು, ಅದಕ್ಕೆ ಅವಕಾಶ ಹೆಚ್ಚು. ಆದುದರಿಂದ ಶಾಲೆ ಬಿಟ್ಟ ತಕ್ಷಣ ಉದ್ಯೋಗ ದೊರೆಯುವಂತೆ ಅದಕ್ಕೆ ತಕ್ಕ ಶಿಕ್ಷಣವನ್ನು, ಡೈರಿ ಫಾರಂ, ಪೌಲ್ಟ್ರಿ ಫಾರಂ ಮುಂತಾದುವುಗಳನ್ನು ತೆರೆದು ಸ್ವತಂತ್ರವಾಗಿ ಸಂಪಾದಿಸಲು ಅನುಕೂಲ ವಾಗುವಂಥ ಶಿಕ್ಷಣವನ್ನು ಕೊಡುವುದು ಸೂಕ್ತ. ಇದಕ್ಕೆ ತಕ್ಕಂತೆ ವಿದ್ಯಾಭ್ಯಾಸದ ಕ್ರಮವನ್ನು ಬದಲಾಯಿಸಿ ಸ್ವತಂತ್ರವಾಗಿ ಬಾಳಲು ಅವಕಾಶ ಮಾಡಿಕೊಡಬೇಕು.

ಅನೇಕ ಹಳ್ಳಿಗಳಲ್ಲಿ ಶಾಲಾ ಕಟ್ಟಡಗಳಿಲ್ಲ, ಕೆಲವು ಕಟ್ಟಡಗಳ ಕೆಲಸ ಅರ್ಧವಾಗಿದೆ, ಅದನ್ನು ಪೂರ್ತಿಮಾಡಬೇಕು, ಕಟ್ಟಡಗಳಿಲ್ಲದಿರುವ ಕಡೆಗಳಿಗೆ ಒದಗಿಸಬೇಕು. ಹಾಸ್ಟೆಲುಗಳ ಸ್ಥಿತಿ ಚೆನ್ನಾಗಿಲ್ಲ. ಮಂತ್ರಿಗಳು ಪ್ರವಾಸಮಾಡುವಾಗ ಅನಿರೀಕ್ಷಿತವಾಗಿ ಹಾಸ್ಟೆಲುಗಳಿಗೆ ಭೇಟಿ ಕೊಟ್ಟು ಅಲ್ಲಿ ಹುಡುಗರಿಗೆ ಒದಗಿಸುವ ಆಹಾರ ಯಾವ ರೀತಿ ಇರುತ್ತದೆಂಬುದನ್ನು ಪರೀಕ್ಷೆಮಾಡಬೇಕು. ಅದನ್ನು ರುಚಿ ನೋಡಬೇಕು. ಅಲ್ಲಿನ ವಿದ್ಯಾರ್ಥಿಗಳು ಆಸ್ಪತ್ರೆ ರೋಗಿಗಳಿಗಿಂತ ಕಡೆಯಾಗಿದ್ದಾರೆ. ಅವರಿಗೆ ಕೊಡುವ ಆಹಾರವನ್ನು ಯಾರೂ ತಿನ್ನುವುದಕ್ಕಾಗುವುದಿಲ್ಲ.

ಶಿವಮೊಗ್ಗದಲ್ಲಿ ಗೋಪಾಲಗೌಡರ ಹೆಸರಿನಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ತೆರೆಯ ಬೇಕು. ಶಾಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ. ಬೇಸಿಗೆಯಲ್ಲಿ ನೀರು ಕುಡಿಯಲು ದೊರೆಯುವುದಿಲ್ಲ, ಹತ್ತಿರ ಬಾವಿ ಇರುವುದಿಲ್ಲ. ಆಟದ ಮೈದಾನ ಮತ್ತು ಲೈಬ್ರರಿ ಸೌಕರ್ಯ ವಿರುವುದಿಲ್ಲ. ಇದಕ್ಕೆಲ್ಲಾ ಗಮನಕೊಟ್ಟು ಸರಿಯಾದ ವ್ಯವಸ್ಥೆ ಮಾಡಿದರೆ ಒಳ್ಳೆಯದು.

ಈಗಿನ ಉಪಾಧ್ಯಾಯರುಗಳಿಗೆ ರಕ್ಷಣೆ ಕೊಡಬೇಕು. ಪರೀಕ್ಷೆ ನಡೆಯುವಾಗ ಕಾಪಿ ಹೊಡೆಯುವವರನ್ನು ಹಿಡಿದರೆ ಉಪಾಧ್ಯಾಯರನ್ನು ಸ್ಟ್ಯಾಬ್ ಮಾಡುವರು, ಇದರಿಂದ ಅವರ ಜೀವಕ್ಕೆ ಅಪಾಯ ಬರುವುದು. ಆದುದರಿಂದ ಅವರಿಗೆ ಸರಕಾರ ಸರಿಯಾದ ರಕ್ಷಣೆ ಕೊಡಬೇಕು.

ಕಾನ್‌ವೆಂಟುಗಳಲ್ಲಿ ದರೋಡೆಯಾಗುತ್ತಿದೆ, ಮದರ್ ಫೀಸ್ಟ್, ಫಾದರ್ ಫೀಸ್ಟ್, ಪೇರೆಂಟ್ಸ್ ಫೀಸ್ಟ್ ಎಂದು ಹೇಳಿ ಹಣ ವಸೂಲುಮಾಡುತ್ತಿದ್ದಾರೆ, ಈ ವಿಧವಾದ ದರೋಡೆ ನಡೆಯುತ್ತಿದೆ, ಇದಕ್ಕೆ—ತಕ್ಕ ಬಂದೋಬಸ್ತು ಮಾಡಬೇಕು. ಇಷ್ಟು ಹೇಳಿ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸು ತ್ತೇನೆ.

† ಶ್ರೀ ಕೆ. ಬಿ. ಶಿವಯ್ಯ (ನಂಜನಗೂಡು).—ಸನ್ಮಾನ್ಯ ಅಧ್ಯಕ್ಷರೇ, ವಿದ್ಯಾ ಸಚಿವರು ಮಂಡಿಸಿರುವ ಬೇಡಿಕೆಯನ್ನು ಅನುಮೋದಿಸುತ್ತಾ ಕೆಲವು ಮಾತುಗಳನ್ನಾಡಬೇಕೆಂದು ನಾನು ಅಪೇಕ್ಷಿಪಡುತ್ತೇನೆ. ಸುಮಾರು 60 ಕೋಟಿ ರೂಪಾಯಿಗಳನ್ನು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಲು ವಿದ್ಯಾ ಸಚಿವರು ಒದಗಿಸಿದ್ದಾರೆ. ಬಹುಶಃ ಇದು ಬಜೆಟ್ಟಿನ ಒಟ್ಟು ಹಣದಲ್ಲಿ ನೇಕಡ

20 ರಷ್ಟು ಆಗಬಹುದು. ಅಂದರೆ ಸುಮಾರು ಐದನೆಯ ಒಂದು ಭಾಗ ವಿದ್ಯಾಭ್ಯಾಸಕ್ಕಾಗಿ ಖರ್ಚಾಗುವುದು. ಬಹುಶಃ ಇಷ್ಟೊಂದು ಜವಾಬ್ದಾರಿ ಹೊತ್ತು ಭಾರಿ ಮೊತ್ತವನ್ನು ಖರ್ಚುಮಾಡು ವಾಗ ಮಾನ್ಯ ವಿದ್ಯಾಮಂತ್ರಿಗಳು ಬಹಳ ಮುತುವರ್ಜಿ ವಹಿಸಬೇಕಾಗಿದೆ. ನಾನು ಕೆಲವು ಸಲಹೆ ಗಳನ್ನು ಕೊಟ್ಟು ಈ ಇಲಾಖೆಯಲ್ಲಿರುವ ಲೋಪದೋಷಗಳನ್ನು ತಿಳಿಸುತ್ತೇನೆ.

ಬಹುಶಃ ವಿದ್ಯಾ ಇಲಾಖೆಯಲ್ಲಿ ನಮ್ಮ ರಾಷ್ಟ್ರದಲ್ಲಿ 1835 ರಿಂದ ಎಂದರೆ ಮೆಕಾಲೆ ಕಾಲದಿಂದ ಇದುವರೆಗೆ ಅನೇಕ ಸುಧಾರಣೆಗಳಾಗಿವೆ. ಈ ಸುಧಾರಣೆ ಬಹುಶಃ ಒಂದು ವರ್ಗದ ಅಂದರೆ ಯಾವ ಬಂಡವಾಳಶಾಹಿ ವರ್ಗದವರಿಗೆ ಅನುಕೂಲವಾಗುವುದೇ ಹೊರತು ಸಾಮಾನ್ಯ ವಿಧ್ಯಾರ್ಥಿಗಳಿಗೆ ಅನುಕೂಲವಾಗುವುದಿಲ್ಲ. ಇಂದು ನಾವು ಸಮಾಜವಾದಿ ಸಮಾಜವನ್ನು ನಿರ್ಮಾಣಮಾಡಬೇಕೆಂಬ ಗುರಿಯನ್ನಿಟ್ಟುಕೊಂಡಿದ್ದೇವೆ. ಅದನ್ನು ಪ್ರಜಾಪ್ರಭುತ್ವದ ಚೌಕಟ್ಟಿನಲ್ಲಿ ಸಾಧಿಸಬೇಕೆಂದು ಇದ್ದೇವೆ. ನಮ್ಮರಾಷ್ಟ್ರದ ಐಕ್ಯತೆಯನ್ನು ಕಾಪಾಡಲು ಆರ್ಥಿಕ ಮತ್ತು ಸಾಮಾಜಿಕ ಸುಧಾರಣೆ ಸಾಧಿಸಲು ಸೂಕ್ತಕ್ರಮ ಕೈಕೊಳ್ಳಬೇಕು. ಈ ದೃಷ್ಟಿಯಿಂದ ನಮ್ಮ ಗುರಿಯನ್ನು ಮುಟ್ಟಲು ತಜ್ಞರ ಒಂದು ಸಮಿತಿಯನ್ನು ರಚಿಸಿ ಹಿಂದುಳಿದವರು, ಹರಿಜನರು, ಗಿರಿಜನರು ಮುಂತಾದವರೆಲ್ಲರ ಹಿತ ಸಾಧಿಸಲು ಅವರಿಗೆ ವಿದ್ಯೆ ಮುಂತಾದ ಅನುಕೂಲತೆಗಳು ದೊರೆಯುವಂತೆ ಸುಧಾರಣೆಯನ್ನು ಜಾರಿಗೆ ತರಲು ಜಾಗ್ರತೆಯಾಗಿ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ವಿದ್ಯಾಭ್ಯಾಸ ಕ್ರಮದಲ್ಲಿ ತಾರತಮ್ಯವಿದೆ, ಶೋಷಣೆಯಿದೆ, ಅವ್ಯವಸ್ತೆ ಇದೆ. ಉದಾಹರಣೆಗೆ ರಾಜ್ಯಾಂಗ 14 ವರ್ಷದವರೆಗೆ ಎಲ್ಲ ಮಕ್ಕಳಿಗೂ ಉಚಿತ ವಿದ್ಯಾಭ್ಯಾಸ ನೀಡಬೇಕೆಂದು ಒತ್ತಿ ಹೇಳುವುದು. ಆದರೆ ಗ್ರಾಮಾಂತರಗಳಲ್ಲಿ ವಿದ್ಯಾಭ್ಯಾಸ ಕ್ರಮವನ್ನು ನೋಡಿದರೆ ಬಹುಶಃ ಹಿಂದುಳಿದವರಿಗೆ, ಹರಿಜನ ಗಿರಿಜನರಿಗೆ ಮತ್ತು ಹೆಣ್ಣು ಮಕ್ಕಳಿಗೆ ಇಂದು ವಿದ್ಯಾಭ್ಯಾಸ ಇದೆಯೇ ಎಂದರೆ ಇಲ್ಲ ಎಂದು ಹೇಳಬೇಕಾಗಿದೆ. ಪ್ರೀಪ್ರೈಮರಿ ವಿದ್ಯಾಭ್ಯಾಸ ಪಟ್ಟಣಗಳಲ್ಲಿ ಇವೆಯೇ ಹೊರತು ಹಳ್ಳಿಗಳಲ್ಲಿಲ್ಲ. ಪಟ್ಟಣಗಳಲ್ಲಿ ಕೂಡ ಕೊಳಚೆ ಪ್ರದೇಶದಲ್ಲಿಲ್ಲ. ಪ್ರೈಮರಿ ವಿದ್ಯಾಭ್ಯಾಸಕ್ಕೆ ಹಳ್ಳಿಗಳಲ್ಲಿ ಮುಂದು ವರೆದ ಮಧ್ಯಮ ವರ್ಗದ ಮಕ್ಕಳು ಬರುವರೇ ಹೊರತು ಉಳಿದವರು ಸಾಮಾನ್ಯವಾಗಿ ಬರುತ್ತಿಲ್ಲ, ಸೇಕಡ 91 ಮಂದಿ ರಿಜಿಸ್ಟರ್ ಮಾಡಿದ್ದಾರೆ ಎಂದು ಅಂಕಿಅಂಶಗಳಿಂದ ಗೊತ್ತಾಗುವುದು. ಹಳ್ಳಿಗಳಲ್ಲಿ ಹಿಂದುಳಿದವರಿಗೆ, ಹರಿಜನ ಗಿರಿಜನರಿಗೆ, ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಸೌಕರ್ಯ ಇನ್ನೂ ಸಿಕ್ಕುತ್ತಿಲ್ಲ. ಅನೇಕ ಹಳ್ಳಿಗಳಲ್ಲಿ ಸರಕಾರಿ ಶಾಲೆಯಿಲ್ಲ, ಶಾಲೆ ಇದ್ದರೆ ಕಟ್ಟಡ ಇಲ್ಲ. ಕಟ್ಟಡ ಕೆಲವಿದ್ದರೂ ಸಾಕಷ್ಟಿಲ್ಲ. ಉಪಾಧ್ಯಾಯರಿಗೆ ಮನೆ ಇಲ್ಲ. ಹೀಗೆ ನಾನಾ ಬಗೆಯ ನ್ಯೂನತೆ ಗಳಿವೆ. ಉಚಿತವಾದ ಕಡ್ಡಾಯ ವಿದ್ಯಾಭ್ಯಾಸ ಸಿಕ್ಕಬೇಕಾದರೆ ಹಿಂದುಳಿದವರು ಹರಿಜನ ಗಿರಿ ಜನರು ಮುಂತಾದವರ ಮಕ್ಕಳಿಗೆ ಉಚಿತವಾಗಿ ಸ್ಲೇಟು, ಪುಸ್ತಕ, ಬಟ್ಟೆ ಮತ್ತು ಮಧ್ಯಾಹ್ನದ ಉಪಹಾರ ಮುಂತಾದ್ದನ್ನೆಲ್ಲಾ ಕೊಟ್ಟು ಪ್ರೋತ್ಸಾಹಿಸಬೇಕು. ಹಾಗೆ ಮಾಡಿದರೆ ಮಾತ್ರ ರಾಜ್ಯಾಂಗದ 14ನೆಯ ಆರ್ಟಿಕಲ್ ಪ್ರಕಾರ ಕಡ್ಡಾಯ ಶಿಕ್ಷಣ ಎಲ್ಲ ಮಕ್ಕಳಿಗೂ ದೊರೆತು ಉದ್ದೇಶ ಸಾಧನೆಯಾಗಿ ಸಮಾಜವಾದದ ನೀತಿಯನ್ನು ಆಚರಣೆಗೆ ತರಲು ಸರಿಯಾದ ಅವಕಾಶ ವಾಗುವುದು. ಇಲ್ಲದಿದ್ದರೆ ತಾರತಮ್ಯವಾಗುವುದು ಎಂಬುದನ್ನು ಗಮನಕ್ಕೆ ತರುತ್ತೇನೆ. ಬಹುಶಃ ಹೈಸ್ಕೂಲಿನಲ್ಲಿ ಮೂರು ರೀತಿಯ ಮ್ಯಾನೇಜ್‌ಮೆಂಟ್ ಇದೆ, ಒಂದು ಸರಕಾರ ನಡೆಸುವುದು ಒಂದು ಸ್ಥಳೀಯಸಂಸ್ಥೆ ನಡೆಸುವುದು, ಮತ್ತೊಂದು ಖಾಸಗಿಯವರು ನಡೆಸುವುದು. ಖಾಸಗಿ ಹೈಸ್ಕೂಲುಗಳು ಅನೇಕವಾಗಿವೆ. ಅಲ್ಲಿ ಶೋಷಣೆ ಇದೆ, ಅನೇಕ ಮಾನ್ಯ ಸದಸ್ಯರು ಅಲ್ಲಿ ಶೋಷಣೆ ಎಷ್ಟುಮಟ್ಟಿಗಿದೆ ಎಂಬುದನ್ನು ತಿಳಿಸಿದ್ದಾರೆ, ಮೇಲ್ಮನೆಯಲ್ಲೂ ಇದನ್ನು ಹೇಳಿದ್ದಾರೆ. ಹೈಸ್ಕೂಲು ಗಳಲ್ಲಿ ಶೋಷಣೆ ಇರುವುದರಿಂದ ಸರಕಾರ ವಿಚಾರಮಾಡಿ ಅವುಗಳನ್ನು ತಮ್ಮ ವಶಕ್ಕೆ ತೆಗೆದು ಕೊಳ್ಳಬೇಕು ಎಂದು ಸಲಹೆ ಮಾಡುತ್ತೇನೆ. ಪ್ರೀಪ್ರೈಮರಿಯಿಂದ ಹೈಸ್ಕೂಲಿನವರಗೆ ರಾಷ್ಟ್ರೀಕರಣ ಮಾಡಲು ಪ್ರಯತ್ನಮಾಡಬೇಕು. ಯಾವ ಶೋಷಣೆಗೂ ಅವಕಾಶವಿರಬಾರದು. ಒಂದುವೇಳೆ ಎಲ್ಲ ಶಾಲೆಗಳನ್ನೂ ತೆಗೆದುಕೊಳ್ಳಲು ಸಾಧ್ಯವಾಗದಿದ್ದರೆ ಎಲ್ಲಿ ಅನೀತಿಯಿದೆ ಅಂಥ ಶಾಲೆಗಳ ನ್ನಾದರೂ ತೆಗೆದುಕೊಳ್ಳಬೇಕೆಂದು ಸಲಹೆಮಾಡುತ್ತೇನೆ. ಇನ್ನು ಮುಂದೆ ಸರಕಾರದವರು ಖಾಸಗಿ ಯವರಿಗೆ ಹೈಸ್ಕೂಲು, ಪ್ರೀ ಪ್ರೈಮರಿ ಅಥವಾ ಪ್ರೈಮರಿ ಶಾಲೆಗಳ ಬಗ್ಗೆ ಯಾವ ಪರಿಹಾರ ವನ್ನೂ ಕೊಡಬಾರದೆಂದು ಸಲಹೆಮಾಡುತ್ತೇನೆ.

ಎಸ್. ಎಸ್. ಎಲ್. ಸಿ. ಆದನಂತರ ಕಾಲೇಜುಗಳಿಗೆ ಪ್ರವೇಶಮಾಡುವರು. ಆದರೆ ಡಿಗ್ರಿ ಪಡೆದಮೇಲೆ ನಿರುದ್ಯೋಗ ಸಮಸ್ಯೆ ಉದ್ಭವವಾಗುವುದು. ಆದುದರಿಂದ ಇಂಡಸ್ಟ್ರಿಯಲ್ ಶಾಲೆ, ವ್ಯವಸಾಯ ಶಾಲೆ ಮುಂತಾದುವನ್ನು ತೆರೆದು ಪ್ರತಿಯೊಬ್ಬರಿಗೂ ಎಸ್.ಎಸ್.ಎಲ್.ಸಿ. ಆದಮೇಲೆ ಉದ್ಯೋಗ ದೊರೆಯುವಂತೆ ಮಾಡಬೇಕು.

(ಶ್ರೀ ಕೆ. ಬಿ. ಶಿವಯ್ಯ)

ಇನ್ನು ಅಂಗವಿಕಲರಾದ ಕುರುಡರು, ಮೂಗರು, ಕಿವುಡರು ಈ ಮಕ್ಕಳುಗಳು ಏನು ಇರುತ್ತಾರೋ ಅವರ ಬಗ್ಗೆ ಒಂದು ಶಿಕ್ಷಣಕ್ಕೆ ವ್ಯವಸ್ಥಿತವಾದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಅವರೂ ಕೂಡ ವಿದ್ಯಾಭ್ಯಾಸವನ್ನು ಮಾಡಿ ಸ್ವತಃ ತಮ್ಮ ಜೀವನವನ್ನು ಸಾಗಿಸಿಕೊಳ್ಳಲು ಒಂದು ವ್ಯವಸ್ಥಿತ ಏರ್ಪಾಟು ಮಾಡಿಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಟೆಕ್ಸ್ಟ್‌ಬುಕ್‌ಗಳ ವಿಚಾರ. ಇದರ ಬಗ್ಗೆ ಹೇಳುವುದಾದರೆ ಪ್ರೀಪ್ರೈಮರಿಯಿಂದ ಎಸ್. ಎಸ್. ಎಲ್. ಸಿ. ಯವರೆಗೂ ಪಠ್ಯಪುಸ್ತಕಗಳನ್ನು ಪೂರ್ಣವಾಗಿ ರಾಷ್ಟ್ರೀಕರಣ ಮಾಡಬೇಕು ಎನ್ನುವ ಬಗ್ಗೆ ಈಗಾಗಲೇ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದರು. ಆ ರೀತಿ ಎಸ್. ಎಸ್. ಎಲ್. ಸಿ. ಯವರೆಗೂ ಪಠ್ಯಪುಸ್ತಕಗಳನ್ನು ರಾಷ್ಟ್ರೀಕರಣ ಮಾಡಿ ಕಡಿಮೆ ಬೆಲೆಯಲ್ಲಿ ಪುಸ್ತಕಗಳನ್ನು ಎಲ್ಲಾ ಮಕ್ಕಳಿಗೂ ಒದಗಿಸುವಂತೆ ಏರ್ಪಾಡು ಮಾಡಬೇಕು ಎಂದು ಹೇಳುತ್ತೇನೆ.

11–30 A. M.

ಇನ್ನು ಜಾತ್ಯಾತೀತ ಸಮಾಜದ ಬಗ್ಗೆ ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ಕೆಲವು ಸಂಸ್ಥೆಗಳು, ಕೆಲವು ಹಾಸ್ಟಲುಗಳು, ಕೆಲವು ಶಾಲೆಗಳು ಜಾತ್ಯಾತೀತ ಮನೋಭಾವನ್ನು ಇಟ್ಟುಕೊಂಡು ನಡೆಸುತ್ತಿದ್ದಾರೆ. ಕೆಲವು ಹಾಸ್ಟಲುಗಳಲ್ಲಿ ಅವರವರ ಜಾತೀಯ ಮಕ್ಕಳುಗಳನ್ನು ಸೇರಿಸಿಕೊಂಡು ಜಾತೀಯತೆಯನ್ನು ಬೆಳೆಸುತ್ತಿದ್ದಾರೆ. ಈ ಜಾತೀಯ ಭಾವನೆಯಿಂದ ಕೆಲವು ಶಾಲೆಗಳಲ್ಲಿ ವಾರದ ರಜಾವನ್ನು ತಮಗೆ ಬೇಕಾದ ರೀತಿಯಲ್ಲಿ ಅಂದರೆ ಕೆಲವರು ಶುಕ್ರವಾರ ಮತ್ತೆ ಕೆಲವರು ಭಾನುವಾರ ಕೊಡುತ್ತಿದ್ದಾರೆ. ಈ ರೀತಿ ಜಾತೀಯತೆ ಬೆಳೆಸಿಕೊಂಡು ಹೋಗುವ ಸಂಸ್ಥೆಗಳಾಗಿವೆ. ಆದುದರಿಂದ ಇಂಥಾ ಸಂಸ್ಥೆಗಳನ್ನು ಪರಿಶೀಲಿಸಿ ಎಲ್ಲವನ್ನು ಸರ್ಕಾರ ತನ್ನ ವಶಕ್ಕೆ ತೆಗೆದುಕೊಂಡು ಈ ಜಾತೀಯ ಮನೋಭಾವನೆಯನ್ನು ಬೆಳೆಯದಂತೆ ಏರ್ಪಾಡು ಮಾಡಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಎಸ್. ಬಂಗಾರಪ್ಪ (ಸೊರಬ).— ಮಾನ್ಯ ಅಧ್ಯಕ್ಷರೇ, ವಿದ್ಯಾ ಸಚಿವರು ಮಂಡನೆಮಾಡಿರತಕ್ಕಂಥ ಸುಮಾರು 60 ಕೋಟಿ ರೂಪಾಯಿಗಳ ಆಯವ್ಯಯದ ಬಗ್ಗೆ ವಿರೋಧ ಮಾಡುತ್ತಾ ನಾನು ಇದರಬಗ್ಗೆ ನಾಲ್ಕು ವಿಷಯಗಳನ್ನು ಈ ಸದನದ ಮುಂದೆ ತರುವುದಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಹಲವಾರು ಮಾನ್ಯ ಸದಸ್ಯರು ಈ ಇಲಾಖೆಗಳಲ್ಲಿರತಕ್ಕಂಥ ನ್ಯೂನತೆಗಳ ಬಗ್ಗೆ ಹಾಗೂ ಇದರ ಕರ್ತವ್ಯ ವಿಧಾನಗಳ ಬೆಳಕನ್ನು ಚೆಲ್ಲಿದ್ದಾರೆ. ನಾನಾದರೂ ಕೂಡ ಈ ದಿಸೆಯಲ್ಲಿ ಒಂದೆರಡು ವಿಷಯಗಳನ್ನು ಪ್ರಸ್ತಾಪಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಮೊಟ್ಟಮೊದಲನೆಯದಾಗಿ ಮೈಸೂರು ರಾಜ್ಯದಲ್ಲಿ ಕಾಲೇಜು ವಿದ್ಯಾಭ್ಯಾಸ ಕೊಡತಕ್ಕಂಥ ಜವಾಬ್ದಾರಿ ಮೂರು ಯೂನಿವರ್ಸಿಟಿಗಳ ಮೇಲೆ ಬಿದ್ದಿದೆ. ಮತ್ತು ಪ್ರೈಮರಿ ಎಜುಕೇಷನ್ ಜವಾಬ್ದಾರಿ ಸರ್ಕಾರದ ಮೇಲೆ ಬಿದ್ದಿದೆ. ಆದರೆ ಈ ವಿದ್ಯಾಭ್ಯಾಸದ ಮಟ್ಟವನ್ನು ಪರಿಶೀಲನೆ ಮಾಡುವುದಾದರೆ ನಮ್ಮ ಮೈಸೂರು ರಾಜ್ಯದಲ್ಲಿ ಜಾತೀಯ ಆಧಾರದ ಮೇಲೆ, ಕೋಮಿನ ಆಧಾರದ ಮೇಲೆ ವಿದ್ಯಾಭ್ಯಾಸ ಕೊಡತಕ್ಕಂಥ ಪದ್ಧತಿ ಮತ್ತು ಡಿಗ್ರಿಗಳನ್ನು ಕೂಡ ದಯಪಾಲಿಸತಕ್ಕಂಥ ಪದ್ಧತಿ ಇದೆ. ಕಾಲೇಜುಗಳಲ್ಲಿರತಕ್ಕಂಥ ಪ್ರೊಫೆಸರ್ಸ್ ಕೂಡ ತಮ್ಮ ಜಾತಿಯವರಿಗೇನೇ ತೇರ್ಗಡೆ ಮಾಡಿಸುವುದು ಫಸ್ಟ್ ಕ್ಲಾಸ್ ರ್‍ಯಾಂಕ್ ಕೊಡುವುದು ಮತ್ತು ಕೆಲಸವನ್ನು ಕೊಡತಕ್ಕಂಥ ಪದ್ಧತಿ ಇದೆ ಎಂದು ಕೇಳಿದ್ದೇನೆ ಮತ್ತು ಕಂಡಿದ್ದೇನೆ. ನನಗೆ ಅನಿಸುತ್ತದೆ ಈ ವಿದ್ಯಾ ಮಂತ್ರಿಗಳು ಮೂರು ಯೂನಿವರ್ಸಿಟಿಗಳಿಗೂ ಮ್ಯಾನೇಜಿಂಗ್ ಡೈರೆಕ್ಟರ್ ಇದ್ದ ಹಾಗೆ ಎಂದು. ಇವರಿಗೆ ಯಾವ ಯಾವ ಯೂನಿವರ್ಸಿಟಿ ಸೇರಿವೆ ಎಂದರೆ ಬೆಂಗಳೂರು ಯೂನಿವರ್ಸಿಟಿ, ಕರ್ನಾಟಕ ಯೂನಿವರ್ಸಿಟಿ ಮತ್ತು ಮೈಸೂರು ಯೂನಿವರ್ಸಿಟಿಗಳು. ಇದರಲ್ಲಿ ಜಾತೀಯ ಭಾವನೆ ಇವೆ ಎಂದು ಕಂಡು ಬರುತ್ತದೆ. ಹೇಗೆಂದರೆ ಕರ್ನಾಟಕ ವಿಶ್ವವಿದ್ಯಾನಿಲಯ ಲಿಂಗಾಯಿತರದ್ದು ಎಂತಲೂ ಮೈಸೂರು ಯೂನಿವರ್ಸಿಟಿ ಒಕ್ಕಲಿಗರದ್ದು ಎಂತಲೂ ಹೇಳುತ್ತಿದ್ದಾರೆ. ಬೆಂಗಳೂರು ಯೂನಿವರ್ಸಿಟಿ ಇದರಲ್ಲಿ ಯಾರದು ಮೇಲುಗೈ ಎಂದು ಒದ್ದಾಟಕ್ಕೆ ಸಿಕ್ಕಿಕೊಂಡಿದೆ. ಮತ್ತು ಅಗ್ರಿಕಲ್ಚರಲ್ ಯೂನಿವರ್ಸಿಟಿ ಕೂಡ ಒಕ್ಕಲಿಗರದ್ದೇ ಎನ್ನುವ ಅಪಾದನೆ ಇದೆ. ಈ ರೀತಿಯ ಜಾತೀಯ ಮನೋಭಾವನೆ ಇರುವುದನ್ನು ಕೊನೆಗಾಣಿಸಿ ಎಂದು ಹೇಳುತ್ತೇನೆ. ಈ ವಿಷಯವನ್ನು ಹಿಂದೆಯೂ ಕೂಡ

ಪ್ರಸ್ತಾಪ ಮಾಡಿದ್ದೇನೆ. ಮ್ಯಾನೇಜಿಂಗ್ ಡೈರಕ್ಟರ್ ಆದ ವಿದ್ಯಾಮಂತ್ರಿಗಳು ತಮ್ಮ ಸ್ಥಾನಕ್ಕೆ ಎಷ್ಟೋ ಜನ ಬಂದು ರಿಟೈರ್ಡ್ ಆಗಿದ್ದಾರೆ. ಈಗ ತಾವು ಬಂದಿದ್ದೀರಿ. ಈ ಮೂರು ವಿಶ್ವವಿದ್ಯಾ ನಿಲಯದ ವೈಸ್ ಛಾನ್ಸಲರ್ಸ್ ನಿಮಗೆ ಅಸಿಸ್ಟೆಂಟ್ ಡೈರಕ್ಟರ್ಸ್ ಇದ್ದ ಹಾಗೆ. ಮೈಸೂರು ಯೂನಿವರ್ಸಿಟಿ ತಮ್ಮವರನ್ನೇ ಸೇರಿಸಿಕೊಳ್ಳತಕ್ಕಂಥಾ ಏರ್ಪಾಡನ್ನು ಇಟ್ಟುಕೊಂಡಿದ್ದಾರೆ. ಇದು ಯೂನಿವರ್ಸಿಟಿಗೆ ಒಂದು ಗಂಡಾಂತರವೇ ಎಂದು ಹೇಳಬಹುದು. ಯೂನಿವರ್ಸಿಟಿಯ ಅಸಿಸ್ಟೆಂಟ್ ಡೈರಕ್ಟರ್ಸ್ ಇದಕ್ಕೆ ಕ್ರಾಂತಿಕಾರರು ಎಂದು ಹೇಳಬಹುದು. ಹೇಗೆಂದರೆ ಕರ್ನಾಟಕ ಯೂನಿವರ್ಸಿಟಿ ಅಸಿಸ್ಟೆಂಟ್ ಡೈರಕ್ಟರ್ ಆದ ಶ್ರೀ ಅಡಕೆಯವರು ಮತ್ತು ಹಿಂದೆ ಇದ್ದ ವೈಸ್‌ಛಾನ್ಸಲರ್ಸ್ ಇವ ರೆಲ್ಲರೂ ಕೂಡ ತಮ್ಮ ಜಾತಿಯವರನ್ನೇ ಸೇರಿಸಿಕೊಳ್ಳುತ್ತಾರೆ ಎನ್ನುವ ಅಪಾದನೆ ಇದೆ. ಇಂತಹ ಜಾತಿಯ ಭಾವನೆ ಎಲ್ಲಾ ಯೂನಿವರ್ಸಿಟಿಗಳಲ್ಲೂ ಕಂಡು ಬರುತ್ತಾ ಇದೆ. ಆದುದರಿಂದ ಮೈಸೂರು ರಾಜ್ಯದಲ್ಲಿರುವಂಥಾ ಯೂನಿವರ್ಸಿಟಿಯವರು ಈ ಯುವಕರಿಗೆ ಏನು ವಿದ್ಯೆಯನ್ನು ಕೊಡುತ್ತಾರೋ ಆ ಪದ್ಧತಿಯಿಂದ ಈಗಿರುವ ಯುವಕರನ್ನು ತಪ್ಪುದಾರಿಗೆ ಎಳೆಯುತ್ತಿದ್ದಾರೆ. ಈ ಮೂರು ಯೂನಿವರ್ಸಿಟಿಗಳಲ್ಲೂ ಕೂಡ ತಮ್ಮತಮ್ಮವರಿಗೇನೇ ಅನೇಕ ಸಾವಿರಾರು ಜನರಿಗೆ ಪಾಸು ಮಾಡಿಸಿ ಸರ್ಟಿಫಿಕೇಟ್ ಕೊಟ್ಟು ಹೊರಗೆ ಕಳುಹಿಸುತ್ತಿದ್ದಾರೆ. ಮುಂದೆ ಅವರ ಗತಿ ಏನು ಎನ್ನುವುದನ್ನು ಯೋಚನೆ ಮಾಡಬೇಕು. ತಮ್ಮ ಜೀವನದ ಪರಿಸ್ಥಿತಿ ಬಗ್ಗೆ ಯುವಕರ ರಕ್ತ ಚಿಮ್ಮುತ್ತಾ ಇದೆ. ಇಂಥ ಯುವಕರನ್ನು ರಾಜ್ಯಕ್ಕೆ ವಿನಿಯೋಗಿಸಲಾಗಿಡಬೇಕಾಗಿದೆ. ಆದರೆ ಈವೊತ್ತಿನ ದಿವಸ ಏನಾಗಿದೆ ಎಂದರೆ ದಯವಿಟ್ಟು ನಾನು ಹೇಳುವುದನ್ನು ಯಾವ ಯುವಕರುತಪ್ಪು ತಿಳಿಯಬಾರದು. ಯುವಕರು ಶಾಸಕರ ಬಳಿಗೆ, ಮಂತ್ರಿಗಳ ಮನೆಬಾಗಿಲಿಗೆ, ಅಧಿಕಾರಿಗಳ ಮನೆ ಬಾಗಿಲಿಗೆ ನಾಯಿಗಳ ಹಾಗೆ ಅಲೆಯುತ್ತಿದ್ದಾರೆ. ಇದನ್ನು ವಿಚಾರ ಮಾಡಬೇಕು. ಮುಂದೆ ಅವರ ಬಗ್ಗೆ ಏನು ಯೋಜನೆ ಹಾಕಿದ್ದೀರಿ ಎಂದು ಹಣಕಾಸಿನ ಮಂತ್ರಿಗಳನ್ನು ಕೇಳಬೇಕಾಗಿದೆ. ಮತ್ತು ಟೆಕ್ನಿಕಲ್ ಕಾಲೇಜುಗಳಲ್ಲೂ ಕೂಡ ಪಾಸು ಮಾಡಿಕೊಂಡು ಹೊರಗೆ ಬಂದ ವಿದ್ಯಾರ್ಥಿಗಳಿಗೆ ಏನು ಯೋಜನೆ ಹಾಕಿದ್ದೀರಿ. ಪಾಶ್ಚಿಮಾತ್ಯ ದೇಶಗಳಲ್ಲಿ ಯೂನಿವರ್ಸಿಟಿಯಿಂದ ಹೊರಗೆ ಬಂದ ವಿದ್ಯಾರ್ಥಿ ಗಳು ಕಾರ್ಖಾನೆಗಳೋ, ಅಥವಾ ಯಾವುದಾದರೂ ಒಂದು ಫ್ಯಾಕ್ಟರಿಯನ್ನು ಸ್ವತಃ ನಡೆಸುವ ಒಂದು ಟೆಕ್ನಿಕಲ್ ಶಿಕ್ಷಣವನ್ನು ಕೊಡುತ್ತಾರೆ. ಅರೀತಿ ಯೋಜನೆ ಏನಾದರೂ ಮಾಡಿದ್ದೀರಾ ? ಇವರಿಗೆ ಆ ಯುವಕರ ವಿದ್ಯಾಭ್ಯಾಸ ಹೇಗಾದರೂ ಆಗಲಿ ತಿಂಗಳಾದರೆ ಸಂಬಳ ಬಂದರೆ ಸಾಕು. ಮುಂದೆ ಅವರ ಗತಿ ಏನು ಎನ್ನುವುದನ್ನು ಯೋಚನೆ ಮಾಡುವುದಿಲ್ಲ. ಇದಕ್ಕಿಂಥ ಹಳ್ಳಿಗಳ ಪ್ರೈಮರಿ ಸ್ಕೂಲ್ ಉಪಾಧ್ಯಾಯರು ಎಷ್ಟೋ ಬುದ್ಧಿವಂತರು. ಆದುದರಿಂದ ನಾನು ಹೇಳುವುದು ಈಗ ವಿದ್ಯಾಭ್ಯಾಸ ಕೊಡತಕ್ಕಂಥ ಪದ್ಧತಿ ಏನು ಇದೆ ಅದು ಸರಿಯಾಗಿಲ್ಲ. ಇದನ್ನು ಆಮೂಲಾಗ್ರವಾಗಿ ಪರಿಶೀಲನೆ ಮಾಡಬೇಕು. ಇದು ಎಲ್ಲರೂ ಯೋಚನೆ ಮಾಡತಕ್ಕಂಥ ವಿಷಯ. ನಾನು ಅಧ್ಯಕ್ಷರ ಮೂಲಕ ವಿದ್ಯಾಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಮುಂದೆ ಲಕ್ಷಗಟ್ಟಲೇ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟ್ ಕೊಟ್ಟು, ಡಿಗ್ರಿ ಕೊಟ್ಟು ಹೊರಗೆ ಕಳುಹಿಸುತ್ತೀರಿ. ಅನಂತರ ಅವರ ಗತಿ ಏನು ಎನ್ನುವುದನ್ನು ಯೋಚನೆ ಮಾಡಬೇಕು. ಆದುದರಿಂದ ಅವರಿಗೆ ಯಾವುದಾದರೂ ಒಂದು ಉದ್ಯೋ ಗದ ನೆರವನ್ನು ಒದಗಿಸಲು ಏರ್ಪಾಡು, ಮಾಡಿ. ಇಲ್ಲದೇ ಹೋದರೆ 4-5 ವರ್ಷದವರೆಗೆ ಆ ಶಾಲೆ ಗಳನ್ನು ಮುಚ್ಚಿಬಿಡಿ, ಏತಕ್ಕೋಸ್ಕರ ಅವರಿಗೆ ಆಸೆತೋರಿಸಿ ನಿರಾಸೆ ಮಾಡುತ್ತೀರಾ ? ಇದನ್ನು ಯೋಚನೆ ಮಾಡಿ.

ಇನ್ನು ಡಿಪ್ಲೋಮೊ ಸಿವಿಲ್ ಇಂಜಿನಿಯರ್ಸ್ 8-9 ಸಾವಿರ ಮತ್ತು ಡಿಪ್ಲೋಮಾ ಎಲೆಕ್ಟ್ರಿಕಲ್ ಇಂಜಿನೀಯರ್ಸ್ 6 ಸಾವಿರ ಜನ ಅನ್‌ಎಂಪ್ಲಾಯ್ಡ್ ಆಗಿದ್ದಾರೆ. ಇವರ ಬಗ್ಗೆ ನಾನು ಒಂದು ಪ್ರಶ್ನೆ ಹಾಕಿದಾಗ ಅವರು ಉತ್ತರಕೊಟ್ಟದ್ದು ನಾವು ಅವರಿಗೆಲ್ಲಾ ನೌಕರಿ ಕೊಡುವ ಜವಾಬ್ದಾರಿ ಹೊತ್ತಿಲ್ಲ ಎಂದು ಉತ್ತರ ಕೊಟ್ಟರು.

Sri K. H. PATIL (Minister for Agriculture and Forests).—Will you please give some suggestion of your own ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಅದಕ್ಕೆಲ್ಲಾ ಸಜೆಷನ್ ಕೊಡಬೇಕಾದರೆ ಈಗ ಕಾಲಾವಕಾಶ ಇಲ್ಲ. ಕಾಲಾವಕಾಶ ಕೊಡುವುದಾದರೆ ನಾನು ಸೂಚನೆ ಕೊಡುತ್ತೇನೆ.

ಇನ್ನು ಮೆಡಿಕಲ್ ಕಾಲೇಜಿನಿಂದ ಎಂ. ಬಿ. ಬಿ. ಎಸ್. ಪಾಸುಮಾಡಿಕೊಂಡು ಡಾಕ್ಟರಾಗಿ ಬಂದರೆ ಅವನು ಅವರ ಜಾತಿಯವರನ್ನು ಹಿಡಿದುಕೊಂಡು ಅಪಾಯಿಂಟ್ ಮಾಡಿಸಿಕೊಳ್ಳುತ್ತಾನೆ. ಆತನು ಮೆಡಿಕಲ್ ಕಾಲೇಜಿನಲ್ಲಿ ಅಪಾಯಿಂಟ್ ಆದರೆ ತನ್ನ ಜಾತಿಯವರ ಮೇಲೇನೇ ಹೆಚ್ಚು

(ಶ್ರೀ ಎಸ್. ಬಂಗಾರಪ್ಪ)

ನಿಗಾ ಕೊಡುತ್ತಾನೆ, ಅವನು ಆಸ್ಪತ್ರೆಯಲ್ಲಿ ಕೆಲಸಕ್ಕೆ ಸೇರಿದರೆ ತನ್ನ ಜಾತಿಯವರನ್ನೇ ಒಳಗೂ ಮತ್ತು ಹೊರಗೂ ಚೆನ್ನಾಗಿ ನೋಡಿಕೊಳ್ಳುತ್ತಾನೆ. ಈ ರೀತಿ ಎಲ್ಲದರಲ್ಲೂ ಜಾತೀಯತೆಯನ್ನು ಬೆಳೆಸುತ್ತಿದ್ದಾರೆ. ಅಂಥವರಿಗೆ ಶಿಕ್ಷೆ ಆಗಬೇಕು ಎಂದು ಹೇಳುತ್ತೇನೆ. ಇದರ ಬಗ್ಗೆ ಶೀಘ್ರವಾಗಿ ಸೂಕ್ತಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಈರೀತಿ ಮಾಡುತ್ತಾರೆಂದು ನಾನು ನಂಬಿಕೆ ಇಟ್ಟುಕೊಂಡಿದ್ದೇನೆ.

ಬಿ. ಎ. (ಅನರ್ಸ್)—ಎಕನಾಮಿಕ್ಸ್ ಮತ್ತು ಎಲ್. ಎಲ್. ಬಿ. ಪರೀಕ್ಷೆ ಮೊನ್ನೆ ಏಪ್ರಿಲ್ ತಿಂಗಳಲ್ಲಿ ಆಯಿತು. ಈಗ ಎರಡು ತಿಂಗಳು ಆಯಿತು ಇನ್ನೂ ಕೂಡ ಪರೀಕ್ಷಕರು ಅನ್ಸರ್ ಪೇಪರುಗಳನ್ನು ಯೂನಿವರ್ಸಿಟಿಗೆ ವಾಪಸ್ಸು ಕಳುಹಿಸಿಕೊಟ್ಟಿಲ್ಲ. ಎರಡು ತಿಂಗಳಾದರೂ ಯಾತಕ್ಕೆ ವಾಪಸ್ಸು ಕೊಟ್ಟಿಲ್ಲ ಎಂದು ಇದರ ಬಗ್ಗೆ ಸೂಕ್ತ ಕ್ರಮವನ್ನು ಶೀಘ್ರವಾಗಿ ಯೂನಿವರ್ಸಿಟಿಯವರು ತೆಗೆದುಕೊಳ್ಳಬೇಕು.

ಇನ್ನು ಹೈಯರ್ ಸೆಕೆಂಡರಿ ಸ್ಕೂಲ್ಸ್ ವಿತ್ ಜೂನಿಯರ್ ಕಾಲೇಜುಗಳವರು ಪಿ. ಯು. ಸಿ. ತರಗತಿಗಳನ್ನು ನಡೆಸುವುದಕ್ಕೆ ಮಂತ್ಲಿ ಸ್ಯಾಲರಿ ಗ್ರ್ಯಾಂಟ್ಸ್ ಕೊಡುತ್ತಿದ್ದರು. ಈ ವರ್ಷ ಕಾಂಪೋಜಿಟ್ ಜೂನಿಯರ್ ಕಾಲೇಜುಗಳಿಗೆ ಎರಡನೇ ವರ್ಷದ ಪಿ. ಯು. ಸಿ. ಮಂಜೂರು ಆಗಿದೆ. ಎರಡನೇ ವರ್ಷದ ಪಿ. ಯು. ಪಿ. ಪ್ರಾರಂಭವಾಡಿದರೂ, ಅವರಿಗೆ ಮಂತ್ಲಿ ಗ್ರ್ಯಾಂಟ್ ಕೊಡುತ್ತಿಲ್ಲ.

Sri A. R. BADARINARAYANA.—It is under consideration.

ಶ್ರೀ ಎಸ್. ಬಂಗಾರಪ್ಪ.—ಇದನ್ನು ಕೂಡಲೇ ಮಂಜೂರು ಮಾಡದಿದ್ದರೆ, ಶಿಕ್ಷಕ ವರ್ಗಕ್ಕೆ ಮತ್ತು ಸ್ಟಾಫಿಗೆ ಸಂಬಳ ಕೊಡುವುದಕ್ಕಾಗುವುದಿಲ್ಲ. ಆದುದರಿಂದ ಸರಕಾರದವರು ಕೂಡಲೇ ಇದಕ್ಕೆ ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಅಬ್ರಿಜ್ಡ್ ಸೆಕೆಂಡ್ ಎಡಿಷನ್ ವೆಬ್‌ಸ್ಟರ್ ಡಿಕ್ಷನರಿ 1967 ರ ಬಗ್ಗೆ ಸಹ ಹೋದಸಾರಿ ಸಭೆಯಲ್ಲಿ ಪ್ರಶ್ನೆ ಹಾಕಿದ್ದೇನೆ. ಇದನ್ನು ಮಾರ್ಕೆಟ್ಟಿನಲ್ಲಿ ರಿಲೀಸ್ ಮಾಡಿದ್ದಾರೆ. ಇದು ಕೇಂದ್ರ ಸರಕಾರಕ್ಕೆ ಸಂಬಂಧ ಪಡುತ್ತದೋ ಅಥವಾ ರಾಜ್ಯ ಸರಕಾರಕ್ಕೆ ಸಂಬಂಧ ಪಡುತ್ತದೋ ಗೊತ್ತಿಲ್ಲ. ಅದರಲ್ಲಿ ಎಲ್ಲಾ ದೇಶಗಳ ಭೂಪಟಗಳನ್ನು ಕೊಟ್ಟಿದ್ದಾರೆ. ಕೆಲವನ್ನು ಕೆಂಪು ಬಣ್ಣ ಕೆಲವನ್ನು ಹಸಿರು ಬಣ್ಣ ಮತ್ತು ಕೆಲವನ್ನು ನೀಲಿ ಬಣ್ಣದಲ್ಲಿ ಬರೆದಿದ್ದಾರೆ. ಆದರೆ ಇಂಡಿಯಾದ ಹೆಸರೂ ಕೂಡ ಬರೆಯದೆ, ಅದನ್ನು ಪೂರ್ತಿ ಕಪ್ಪು ಬಣ್ಣದಲ್ಲಿ ಬರೆದಿದ್ದಾರೆ. ಸರಕಾರದವರು ಈ ವಿಷಯದ ಬಗ್ಗೆ ಏನು ಯೋಚನೆ ಮಾಡಿದ್ದಾರೆ ? ಇದು ಕೇಂದ್ರ ಸರಕಾರಕ್ಕೆ ಸಂಬಂಧ ಪಡುವುದಾದರೆ, ಕೇಂದ್ರ ಸರಕಾರದ ಜೊತೆಗೆ ಏತಕ್ಕೆ ವ್ಯವಹಾರ ಮಾಡಲಿಲ್ಲ ? ಇಡೀ ದೇಶಕ್ಕೆ ಅವಮಾನ ಮಾಡತಕ್ಕ ಪ್ರಸಂಗ ಇದು. ಇದರ ಬಗ್ಗೆ ಗಮನ ಕೊಡುತ್ತಾರೆಂದು ನಂಬಿ ಇಷ್ಟು ಹೊತ್ತಿನ ವರೆಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ, ಅಧ್ಯಕ್ಷರನ್ನು ವಂದಿಸಿ, ನಾನು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† Sri BAPU RAO PATIL (Aurad).—*[Spoke in Hindi]*

†ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ (ಹೊಸನಗರ).—ಮಾನ್ಯ ಅಧ್ಯಕ್ಷರೇ, ಈ 60 ಕೋಟಿ ರೂಪಾಯಿಗಳ ವಿದ್ಯಾ ಶಾಖೆಯ ಬಜೆಟನ್ನು ನಾನು ಸ್ವಾಗತಿಸುತ್ತಾ, ಸರ್ವಜ್ಞಮೂರ್ತಿ ಹೇಳಿದಂತೆ "ಗೋರ್ಕಲ್ಲ ಮೇಲೆ ಮಳೆ ಭೋರ್ಗರೆದಂತೆ ಸರ್ವಜ್ಞ" ಎಂದು ನಾನು ಹೇಳುವುದು ಆಗಬಾರದೆಂದು ಆಶಿಸುತ್ತೇನೆ. ಇದಕ್ಕೆ ಕಾರಣ ಇಷ್ಟೇ. ಈ ವಿದ್ಯಾ ಇಲಾಖೆಯ ಕೋರಿಕೆ ಬಂದ ಲಾಗಾಯ್ತು ಈ ಊರಿನ ಅನೇಕಾನೇಕ ವಿಚಾರಗಳು ನನ್ನ ಗಮನಕ್ಕೆ ಬರುತ್ತಿವೆ. ವಿದ್ಯಾ ಇಲಾಖೆಯಲ್ಲಿ ಕೆಲಸ ಮಾಡತಕ್ಕ ಕೆಲವು ಅಫೀಸರುಗಳು ಅವರ ತಮ್ಮ, ಅವರ ಹೆಂಡತಿ ಹೆಸರುಗಳಲ್ಲಿ ಖಾಸಗಿ ಶಾಲೆಗಳನ್ನು ಇಟ್ಟು ಕೊಂಡು ಸರ್ಕಾರ ಅವರಿಗೆ ಖರ್ಚಿನ ಸೇಕಡಾ 60–80 ರಷ್ಟು ಕೊಟ್ಟರೂ ಶೇಕಡಾ 150 ರಷ್ಟು ತೆಗೆದುಕೊಳ್ಳತಕ್ಕ ಕಲೆ ಅವರಿಗೆ ಕರತಲಾಮಲಕವಾಗಿದೆ. ವಿದ್ಯಾ ಇಲಾಖೆಯಲ್ಲಿರತಕ್ಕ ನ್ಯೂನತೆಗಳನ್ನು ತಪಾಸಣೆ ಮಾಡದೆ ನಾವು ಏನು ಹಣ ವೆಚ್ಚ ಮಾಡುತ್ತೇವೆ, ಏನೊಂದು ಉದ್ದೇಶವನ್ನು ಇಟ್ಟುಕೊಂಡು ಈ ಹಣವನ್ನು ಖರ್ಚು ಮಾಡುತ್ತಿದ್ದೇವೆ, ಅದರ ಸಫಲತೆಯಾಗುವುದಿಲ್ಲ ಎನ್ನುವ ಮಾತನ್ನು ಈ ಬೃಹತ್ ಸಭೆಯಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ.

ಈ ಹೊತ್ತು ಖಾಸಗಿ ಶಾಲೆಗಳು ಬೆಳೆಯುವ ರೀತಿಯನ್ನು ನೋಡಿದರೆ, ಮಣಿಪಾಲದ ವಿದ್ಯಾ ಇಲಾಖೆಯನ್ನು ನಾವು ಗಮನಕ್ಕೆ ತೆಗೆದುಕೊಂಡರೆ, 50 ಸಾವಿರ ರೂಪಾಯಿಗಳನ್ನು ಮೆಡಿಕಲ್ ಕಾಲೇಜಿನಲ್ಲಿ ಒಂದು ಸೀಟಿಗೆ ತೆಗೆದುಕೊಳ್ಳತಕ್ಕ ವ್ಯವಸ್ಥೆ ಇರುವುದು ಯಾವ ಚರಿತ್ರೆಯಲ್ಲಿಯೂ ಎಲ್ಲಿಯೂ ನಮಗೆ ಸಿಕ್ಕಲಾರದು. ಸಮಾಜವಾದವನ್ನು ನಿರ್ಮಾಣ ಮಾಡುವುದಕ್ಕೆ ಹೊರಟಿರತಕ್ಕ ನಮ್ಮ ಸರ್ಕಾರ ಇಂಥ ಬಂಡವಾಳಶಾಹಿಗಳಿಗೆ ಅವಕಾಶ ಕೊಡತಕ್ಕ ವಿದ್ಯಾ ಇಲಾಖೆಯನ್ನು ಇಟ್ಟುಕೊಳ್ಳುವುದಾದರೆ ಯಾವ ರೀತಿಯ ಸಮಾಜ ನಿರ್ಮಾಣ ಮಾಡುತ್ತೀರಿ ಎಂದು ನಾನು ಕೇಳ ಬೇಕಾಗುತ್ತದೆ. ಮಣಿಪಾಲದಲ್ಲಿ ಒಂದು ಟೆಸ್ಟ್ ಮಾಡುತ್ತಾರೆ, ಆ ಟೆಸ್ಟ್ ಕೇವಲ ಕಣ್ಣೊರಸುವುದಕ್ಕೆ ಮಾಡುವ ಟೆಸ್ಟ್. ಆ ಟೆಸ್ಟ್‌ನಲ್ಲಿ ಎಷ್ಟು ಅಂಕಗಳು ಬಂದಿವೆ ಎನ್ನುವುದನ್ನು ಯಾವ ವಿದ್ಯಾರ್ಥಿಗೂ ತಿಳಿಸುವುದಿಲ್ಲ. ಏಕೆ ಸೀಟು ಸಿಕ್ಕಲಿಲ್ಲವೆಂದರೆ ನಿನಗೆ ಅಂಕ ಬರಲಿಲ್ಲ ಎಂದು ಹೇಳುತ್ತಾರೆ. ಐದು ಸಾವಿರ ರೂಪಾಯಿ ಡಿಪಾಜಿಟ್ ಕೊಡಬೇಕು, ಟೆಸ್ಟಿಗೆ ಕೂಡಬೇಕು, ಟೆಸ್ಟಿನಲ್ಲಿ ತೇರ್ಗಡೆ ಆದವರಿಗೆ ಮೆಡಿಕಲ್ ಕಾಲೇಜಿನಲ್ಲಿ ಸೀಟು ಕೊಡುತ್ತೇವೆ ಎನ್ನುವ ನಿಯಮವನ್ನು ಇಟ್ಟುಕೊಂಡಿದ್ದಾರೆ. ಆದರೆ ಬ್ಲಾಕ್ ಮಾರ್ಕೆಟ್ ನಡೆಯುತ್ತಿದೆ. ಸೀಟುಗಳನ್ನು ಹರಾಜುಮಾಡಿ ಹತ್ತು ಸಾವಿರ, ಹದಿನೈದು ಸಾವಿರ, ಇಪ್ಪತ್ತು ಸಾವಿರ ಈ ರೀತಿಯಾಗಿ ಯಾರು ಜಾಸ್ತಿ ಕೊಡುತ್ತಾರೆಯೋ ಅವರಿಗೆ ಸೀಟು ಸಿಕ್ಕುತ್ತದೆ, ಬಡಬಗ್ಗರಿಗೆ ವಿದ್ಯಾಭ್ಯಾಸ ತಿರುಕನ ಕನಸಾಗಿದೆ. ದೇವರು ವರ ಕೊಟ್ಟರೂ ಪೂಜಾರಿ ಕೊಡ ಎನ್ನುವ ರೀತಿಯಲ್ಲಿ ವ್ಯವಹಾರಗಳು ವಿದ್ಯಾ ಇಲಾಖೆಯಲ್ಲಿ ನಡೆಯುತ್ತಿವೆ. ವಿದ್ಯಾ ಮಂತ್ರಿಗಳು ಸರಳ ಸ್ವಭಾವದವರಿದ್ದಾರೆ. ಅವರು ಆರ್ಡರ್ ಮಾಡುತ್ತಾರೆ. ಆದರೆ ಅದನ್ನು ಕಾರ್ಯಗತ ಮಾಡುವ ವ್ಯಕ್ತಿಯಿಂದಲೇ ತೊಡಕುಗಳಾಗುತ್ತವೆ. ವಿದ್ಯಾ ಮಂತ್ರಿಗಳು ಪ್ರತಿಯೊಂದು ಹಂತದಲ್ಲೂ ಪ್ರವೇಶ ಮಾಡಿ ನೋಡುವುದಕ್ಕಾಗುವುದಿಲ್ಲ. ಆಡಳಿತ ಯಂತ್ರದ ಮೇಲೆ ಏನಾದರೂ ಹತೋಟಿಯನ್ನು ಇಟ್ಟುಕೊಂಡರೆ ಇನ್ನಾದರೂ ಸ್ವಲ್ಪಮಟ್ಟಿಗಾದರೂ ಕಾರ್ಯಗತವಾಗುತ್ತದೆ. ಇಲ್ಲದೆ ಇದ್ದರೆ ಏನೂ ಆಗುವುದಿಲ್ಲ.

ತಾಲ್ಲೂಕು ಬೋರ್ಡು ಹೈಸ್ಕೂಲುಗಳನ್ನು ಸರ್ಕಾರ ವಹಿಸಿಕೊಂಡಿತು. ಎಷ್ಟೋ ಸ್ಕೂಲುಗಳಲ್ಲಿ ಇಬ್ಬರು ಉಪಾಧ್ಯಾಯರಿದ್ದಾರೆ. ಜವಾನನಾಗಲೀ, ಗುಮಾಸ್ತನಾಗಲೀ ಇರುವುದಿಲ್ಲ. ಕಸ ಗುಡಿಸುವುದರಿಂದ ಹಿಡಿದು ನೀರು ಹೊರುವ ಕೆಲಸದವರೆಗೂ ಆ ಉಪಾಧ್ಯಾಯರು ಮಾಡಬೇಕಾಗುತ್ತದೆ. ಮೂರು ಕ್ಲಾಸುಗಳಿಗೆ ಇವರಿಬ್ಬರೇ ಪಾಠ ಹೇಳಬೇಕಾಗುತ್ತದೆ. ಪದೇ ಪದೇ ಸರ್ಕಾರದ ಗಮನಕ್ಕೆ ತಂದರೂ ಕೂಡ ವಿದ್ಯಾ ಮಂತ್ರಿಗಳು ಕೂಡಲೇ ಉಪಾಧ್ಯಾಯರನ್ನು ಹಾಕಬೇಕೆಂದು ಆರ್ಡರ್ ಮಾಡುತ್ತಾರೆ. ಆದರೆ ಅದನ್ನು ಕಾರ್ಯಗತ ಮಾಡತಕ್ಕ ಅಧಿಕಾರಿಗಳು ಮನಸ್ಸಿಗೆ ತೆಗೆದುಕೊಳ್ಳದ ಹಾಗೆ ಇರುತ್ತಾರೆ. ಉದಾಹರಣೆಗೆ ನಿಟ್ಟೂರು ಹೈಸ್ಕೂಲಿನಲ್ಲಿ ಇಬ್ಬರು ಉಪಾಧ್ಯಾಯರಿದ್ದಾರೆ ಅನೇಕ ಸಲ ಸಂಬಂಧಪಟ್ಟ ಇಲಖೆಯವರ ಗಮನಕ್ಕೆ ತಂದದ್ದಾಗಿದೆ. ನೀವು ಮೇಲಾಧಿಕಾರಿಗಳನ್ನು ಕೇಳಬೇಕು, ಡಿ.ಡಿ.ಪಿ.ಐ., ಡಿ.ಪಿ.ಐ., ಅವರನ್ನು ಕೇಳಿ ಈ ಸಮಸ್ಯೆ ಇಡೀ ರಾಜ್ಯದಲ್ಲಿರುವಂಥ ಸಮಸ್ಯೆ ಎಂದು ಹೇಳುತ್ತಾರೆ. ಸರಿಯಾದ ವ್ಯವಸ್ಥೆಯನ್ನು ಮಾಡುವುದಕ್ಕಾಗದೆ ಇದ್ದಾಗ ಸರ್ಕಾರ ಅಂಥ ಕಾರ್ಯಕ್ರಮಗಳನ್ನು ಏಕೆ ತೆಗೆದುಕೊಳ್ಳುತ್ತಾರೆ ಎಂದು ಕೇಳುತ್ತೇನೆ.

ಪರೀಕ್ಷಾ ಕ್ರಮದ ಬಗ್ಗೆ ಕೆಲವು ಮಾತುಗಳನ್ನು ಆಡಬೇಕಾಗಿದೆ. ನಾನು ಪಾಶ್ಚಿಮಾತ್ಯ ದೇಶಗಳಿಗೆ ಹೋಗಿ ಬಂದವನು. ವರ್ಷಕ್ಕೆ ಒಂದು ಸಲ ಪರೀಕ್ಷೆ ಮಾಡಿ ಅದರಲ್ಲಿ ವಿದ್ಯಾರ್ಥಿ ಪಾಸು ಮಾಡಬೇಕೆಂಬ ಪದ್ಧತಿಯನ್ನು ನಾವು ಇಟ್ಟುಕೊಂಡಿದ್ದೇವೆ. ಇದು ಮೂಲೋತ್ಪಾಟನೆಯಾಗಬೇಕಾಗಿದೆ. ಪರ್ಮಿಟೇಷನ್ ಅಂಡ್ ಕಾಂಬಿನೇಷನ್ ಕೈಕೊಳ್ಳುವುದಾದರೆ ಈ ವರ್ಷ ಇಂಥ ಪ್ರಶ್ನೆ ಕೊಟ್ಟಿದ್ದರು, ಆ ವರ್ಷ ಇಂಥ ಪ್ರಶ್ನೆ ಕೊಟ್ಟಿದ್ದರು, ಈ ವರ್ಷ ಇಂಥದ್ದು ಕೊಟ್ಟೇ ಕೊಡುತ್ತಾರೆ ಎನ್ನುವ ತೀರ್ಮಾನ ಮಾಡಿ, ಅದನ್ನೇ ಓದಿ ಪಾಸು ಮಾಡುತ್ತಾನೆ. ಪಾಸಾದ ತಕ್ಷಣ ಆ ಪುಸ್ತಕದಲ್ಲಿ ಒಂದೆರಡು ಪ್ರಶ್ನೆ ಕೇಳಿದರೆ ಏನೂ ಹೇಳುವುದಕ್ಕೆ ಬರುವುದಿಲ್ಲ. ಅಂಥವರು ದೊಡ್ಡ ದೊಡ್ಡ ಅಧಿಕಾರಿಗಳಾಗಿದ್ದಾರೆ ದೊಡ್ಡ ದೊಡ್ಡ ಜವಾಬ್ದಾರಿ ಸ್ಥಾನದಲ್ಲಿರುತ್ತಾರೆ. ಪಾಶ್ಚಿಮಾತ್ಯ ದೇಶಗಳಲ್ಲಿ ಏನು ಪದ್ಧತಿ ಇದೆ ಎಂದರೆ, ಅಲ್ಲಿ ವಾರಕ್ಕೆ ಒಂದು ಟೆಸ್ಟ್ ಮಾಡುತ್ತಾರೆ, ಅದರಲ್ಲಿ 70 ಪರ್ಸೆಂಟ್ ಮಾರ್ಕ್ಸ್ ತೆಗೆಯಬೇಕು, ಪಾಸ್ ಮಾಡಬೇಕು. ಪ್ರತಿ ಟೆಸ್ಟ್‌ನಲ್ಲಿ ಪಾಸಾಗಿ ವರ್ಷದ ಅಂತ್ಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕು. ಆಗ ಡಿಗ್ರಿ ಕೊಡುತ್ತಾರೆ. ಅವರಿಗೆ ಇಟ್ಟಂಥ ಪ್ರತಿಯೊಂದು ಪಠ್ಯ ಪುಸ್ತಕದಲ್ಲಿ ಪ್ರತಿಯೊಂದು ವಿಚಾರವೂ ಕೂಡ ಆ ವಿದ್ಯಾರ್ಥಿಗೆ ಕರತಲಾಮಲಕವಾಗಿರುತ್ತದೆ. ಅಂಥ ಪದ್ಧತಿ ನಮ್ಮಲ್ಲಿ ಬರಬೇಕಾಗಿದೆ.

ಒಂದೇ ಒಂದು ಮುಖ್ಯವಾದ ವಿಚಾರ ಹೇಳುತ್ತೇನೆ. ನಮ್ಮಲ್ಲಿ ವಿಶ್ವವಿದ್ಯಾಲಯಗಳೇನಿವೆ ಅವು ಇನ್ನು ಮುಂದೆ ಪಟ್ಟಣಗಳಲ್ಲಿ ಕಾಲೇಜು ತೆಗೆಯುವುದನ್ನು ಮುಂದಾದರೂ ನಿಲ್ಲಿಸಬೇಕು.

(ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್)

ವಿದ್ಯಾರ್ಥಿಯಾದವನಿಗೆ ತನ್ನ ಪಾಠಗಳನ್ನು ಓದಬೇಕು ಎನ್ನುವ ಗಮನ ಬರಬೇಕಾಗಿದೆ. ಅವರ ಗಮನವನ್ನು ಬೇರೆಡೆಗೆ ಸೆಳೆಯುವ ಇತರ ಆಕ್ಟಿವಿಟೀಸ್ ಇರಕೂಡದು. ಬೆಂಗಳೂರು ಪಟ್ಟಣವಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ಅನೇಕಾನೇಕ ವಿಚಾರಗಳು, ಅನೇಕಾನೇಕ ನಡವಳಿಕೆಗಳಿರುತ್ತವೆ. ಅದರ ಕಡೆಗೆ ಹೆಚ್ಚು ಗಮನ ಕೊಟ್ಟು ಓದಿನ ಕಡೆಗೆ ಗಮನ ಕೊಡಲು ಸಾಧ್ಯವಾಗುವುದಿಲ್ಲ. ಆದುದರಿಂದ ಇನ್ನು ಮುಂದೆ ಆದಷ್ಟು ಮಟ್ಟಿಗೆ ಕಾಲೇಜುಗಳನ್ನು ಹಳ್ಳಿಗಳಲ್ಲಿ ತೆರೆದು ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನವನ್ನು ಕೊಡುವಂತೆ ಮಾಡಬೇಕು ಎಂದು ಹೇಳುತ್ತೇನೆ.

ಶಿವಮೊಗ್ಗ ಜಿಲ್ಲೆ ಬಹಳ ಹಿಂದುಳಿದ ಭಾಗ. ನಮ್ಮ ವಿದ್ಯಾ ಮಂತ್ರಿಗಳು ಶಿವಮೊಗ್ಗದಿಂದ ಬಂದವರು. ಶಿವಮೊಗ್ಗದಲ್ಲಿ ನಾಲ್ಕನೇ ವಿಶ್ವವಿದ್ಯಾಲಯವನ್ನು ಮಾಡಿದರೆ ಹೇಗೋ ಎಂದು ಯಾವ ದಾಕ್ಷಿಣ್ಯಕ್ಕೂ ಒಳಗಾಬಾರದು. ಖಂಡಿತವಾಗಿ ನಾಲ್ಕನೇ ವಿಶ್ವವಿದ್ಯಾಲಯವನ್ನು ಶಿವಮೊಗ್ಗದಲ್ಲಿ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಸಭಾಪತಿಗಳೇ, ಈ ದಿನ ನಮ್ಮ ಮುಂದೆ ಇಟ್ಟಿರತಕ್ಕ ವಿದ್ಯಾ ಖಾತೆಯ ಬೇಡಿಕೆಯ ಬಗ್ಗೆ ಎರಡು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟದ್ದಕಾಗಿ ತಮಗೆ ವಂದಿಸುತ್ತೇನೆ. ಮೊದಲನೆಯದಾಗಿ ನಾನು ಅನೇಕ ಖಾಸಗೀ ವಿದ್ಯಾ ಸಂಸ್ಥೆಗಳಿಗೆ ಸಂಬಂಧಪಟ್ಟವನು. ಈಗ ನಮ್ಮ ಮುಂದೆ ಇರತಕ್ಕ ಜಟಿಲವಾದ ಹಾಗೂ ಕಠಿಣವಾದ......

Sri C. M. ARUMUGAM (K.G.F.).—Mr. Deputy Speaker Sir, Is this the way the Leader of Opposition Mr. Devegowda conducts himself? I am not under his obligation.

Mr. DEPUTY SPEAKER.—Please do not make allegation against the Leader of the Opposition. The Hon. Leader of the Opposition has given me a list. In the same serial order, I have taken up the names of the Members. It is an adjustment between members and the Hon. Leader of the Opposition.

Sri C. M. ARUMUGAM.—I am not making allegations. My name was second in the list but now it has become the last. You have got a wrong list before you and you are following it. There is no chance for me to get up and catch the eye of the Hon. Deputy Speaker and participate in the proceedings. That is all I wish to say. I leave it to you.

Mr. DEPUTY SPEAKER.—The list is supplied by the Leader of the Opposition. Please have a little patience.

Sri C. M. ARUMUGAM.—You are talking as if I have no patience to sit in this House.

Mr. DEPUTY SPEAKER.—Your name is there. I will call you just now, have a little patience.

Sri C. M. ARUMUGAM.—No Sir, I am not going to take part. I am sorry that I am being treated this way. I am a Member who is always found in the House and I go only when the House rises and you say that I have no patience.

Mr. DEPUTY SPEAKER.—I am following the list supplied to me by the Leader of the Opposition. If anybody wants to find fault, let him think again and again before finding fault with the Chair.

12-00 NOON

ಶ್ರೀ ಟಿ. ಆರ್. ಶಾಮಣ್ಣ.—ಈಗ ನಮ್ಮ ಖಾಸಗೀ ವಿದ್ಯಾಶಾಲೆಗಳ ಬಗ್ಗೆ ಒಂದು ಜಟಿಲವಾದ ಪ್ರಶ್ನೆ ನಮ್ಮ ಮುಂದೆ ಬಂದಿದೆ. ಈ ಸಂದರ್ಭದಲ್ಲಿ ನಾವು ಒಂದು ಮುಖ್ಯವಾದ ಅಂಶವನ್ನು ಗಮನದಲ್ಲಿಟ್ಟುಕೊಳ್ಳಬೇಕು. ನಮ್ಮ ರಾಜ್ಯದಲ್ಲಿ ವಿದ್ಯಾಭ್ಯಾಸ ಒಂದು ಉತ್ತಮ ಮಟ್ಟದಲ್ಲಿ ನಡೆಯುತ್ತಾ ಇರುವುದಕ್ಕೆ ಖಾಸಗಿ ವಿದ್ಯಾಶಾಲೆಗಳು ಸಾಕಷ್ಟು ಸಹಾಯಕವಾಗಿದೆ ಎಂದರೆ ಸರ್ಕಾರದವರು ಒಪ್ಪಿಕೊಳ್ಳುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಈ ಸಮಸ್ಯೆ ಬಗೆಹರಿಯಬೇಕಾದರೆ, ಮೊದಲನೆಯದಾಗಿ ಸರ್ಕಾರದವರು ನಡೆಸುತ್ತಾ ಇರತಕ್ಕ ಶಾಲೆಗಳಲ್ಲಿ ಕೊಡತಕ್ಕಂಥ ವಿದ್ಯಾಮಟ್ಟ ಉತ್ತಮವಾದ ಪಕ್ಷದಲ್ಲಿ ಖಾಸಗೀ ಶಾಲೆಗಳ ಸಮಸ್ಯೆ ಉದ್ಭವವಾಗುವುದಿಲ್ಲ ಎಂದು ಹೇಳಬೇಕಾಗುತ್ತದೆ. ಸರ್ಕಾರಿ ಶಾಲೆಗಳು ಸರಿಯಾಗಿ ನಡೆಯುವುದಿಲ್ಲ ಎಂದು ಹೇಳಿದರೆ ಖಾಸಗೀ ಶಾಲೆಗಳವರು ಉತ್ತಮವಾದ ವಿದ್ಯಾರ್ಥಿಗಳನ್ನು ತೆಗೆದುಕೊಳ್ಳುವುದರಿಂದ ಅಲ್ಲಿ ವಿದ್ಯಾರ್ಥಿಗಳು ಫಸ್ಟ್‌ಕ್ಲಾಸ್‌ನಲ್ಲಿ ಪಾಸು ಮಾಡುತ್ತಾರೆ. ಆದರೆ ಸರ್ಕಾರಿ ಶಾಲೆಗಳಿಗೆ ಒಳ್ಳೆಯ ವಿದ್ಯಾರ್ಥಿಗಳು ಬರುವುದಿಲ್ಲ. ಆದುದರಿಂದ ಅಲ್ಲ ವಿದ್ಯಾರ್ಜನೆ ಸರಿಯಾಗಿ ನಡೆಯುವುದಿಲ್ಲ. ಪಾಸ್ ಸರಿಯಾಗಿ ಆಗುವುದಿಲ್ಲ ಎನ್ನುವ ವಾದವನ್ನು ನಮ್ಮ ಮುಂದೆ ಇಡುತ್ತಾರೆ. ಜೀರೋ ಪರ್ಸೆಂಟ್‌ನಿಂದ ಹಿಡಿದು 30 –32ಪರ್ಸೆಂಟ್ ಪಾಸ್ ಆಗತಕ್ಕ ಅನೇಕ ಸರ್ಕಾರಿ ಶಾಲೆಗಳು ಇವೆ. ಕಾರ್ಪೊರೇಷನ್ 25 ಸ್ಕೂಲುಗಳನ್ನು ನಡೆಸುತ್ತಿದೆ. ಅಲ್ಲಿ ಅರ್ಧ ಪರ್ಸೆಂಟಿನಿಂದ ಹಿಡಿದು ಮ್ಯಾಕ್ಸಿಮಂ 30 ಪರ್ಸೆಂಟ್‌ವರೆಗೂ ಫಲಿತಾಂಶಗಳೂ ಬಂದಿವೆ. ಆದರೆ ಶಾಲೆಯ ಅಧಿಕಾರವರ್ಗದವರು ಸಾಕಾದಷ್ಟು ಶ್ರದ್ಧೆ ವಹಿಸಿದರೆ ಖಂಡಿತವಾಗಿಯೂ ತರಬೇತಿಯ ಮಟ್ಟವನ್ನು ಹೆಚ್ಚಿಸುವುದಕ್ಕೆ ಸಾಧ್ಯ ಇದೆ ಎಂಬುದನ್ನು ನಾನು ಈ ಸಂದರ್ಭದಲ್ಲಿ ನನ್ನ ಸ್ವಂತ ಅನುಭವದಿಂದ ಹೇಳಬೇಕಾಗಿದೆ. ಈಗ ಖಾಸಗಿ ವಿದ್ಯಾಶಾಲೆಗಳು ಸರಿಯಾಗಿ ನಡೆಯುತ್ತಿವೆಯೇ, ಇಲ್ಲವೇ ಎನ್ನುವ ಬಗ್ಗೆ ಒಂದು ಅಂಶವನ್ನು ಸರ್ಕಾರದವರು ಮುಖ್ಯವಾಗಿ ಗಮನದಲ್ಲಿಟ್ಟುಕೊಳ್ಳಬೇಕು. ಯಾವ ವಿದ್ಯಾಶಾಲೆಗಳು ವ್ಯಾಪಾರ ಸಂಸ್ಥೆಯಾಗಿ ನಡೆಯುತ್ತಿವೆ, ಮತ್ತು ಸರಿಯಾದಂಥ ಶಿಸ್ತು ಮತ್ತು ಉತ್ತಮ ಆಡಳಿತ ವರ್ಗವನ್ನು ಇಟ್ಟುಕೊಂಡಿರತಕ್ಕ ವಿದ್ಯಾಸಂಸ್ಥೆಗಳು ಯಾವುವು ಎಂದು ವ್ಯತ್ಯಾಸ ಮಾಡಿ, ಯಾವುದು ಬರೀ ವ್ಯಾಪಾರ ಸಂಸ್ಥೆಯಾಗಿ ಲಾಭವನ್ನು ಪಡೆಯತಕ್ಕ ಸಂಸ್ಥೆಗಳಾಗಿವೆಯೋ ಅವನ್ನು ಮಟ್ಟ ಹಾಕುವುದಕ್ಕೆ ಪ್ರಯತ್ನ ಮಾಡಬೇಕು. ಮ್ಯಾನೇಜ್‌ಮೆಂಟ್ ಲೆಕ್ಕ ಹಾಗೂ ಸ್ಕೂಲುಗಳ ಲೆಕ್ಕಗಳನ್ನು ಸಾರ್ವಜನಿಕರ ಮುಂದೆ ಇಟ್ಟು ಸಾರ್ವಜನಿಕರ ಸ್ವತ್ತಾಗಿ ಪರಿಗಣಿಸುವ ಸಂಸ್ಥೆಗಳನ್ನು ಬೇರ್ಪಡಿಸುವುದು ಮೊದಲನೆಯ ಕೆಲಸ. ಯಾವ ಸಂಸ್ಥೆಯನ್ನು ಸಾರ್ವಜನಿಕರ ಸಂಸ್ಥೆಯಾಗಿ ನಡೆಸಿ, ವಿದ್ಯಾ ಸೇವೆಯನ್ನು ಮಾಡುತ್ತಿವೆಯೋ ಅಂಥವಕ್ಕೆ ಸಾಕಾದಷ್ಟು ಉತ್ತೇಜನವನ್ನು ಸರ್ಕಾರದವರು ಕೊಡಬೇಕು. ಈ ಶಾಲೆಗಳಿಗೆ ಸರ್ಕಾರದವರು ಮುಖ್ಯವಾಗಿ ಬಿಲ್ಡಿಂಗ್ ಗ್ರಾಂಟನ್ನು ಪೂರ್ತಿಯಾಗಿ ಕೊಡುತ್ತಿಲ್ಲ. ಕೆಲವು ಕಡೆ 50 ಪರ್ಸೆಂಟು ಕೊಡುತ್ತಾರೆ, ಕೆಲವು ಕಡೆ ಕಡಿಮೆ ಕೊಡುತ್ತಾರೆ. ಎಕ್ವಿಪ್‌ಮೆಂಟ್ ಗ್ರಾಂಟ್ ಲ್ಯಾಬೋರೇಟರಿ ಗ್ರಾಂಟ್ ಕೊಡುತ್ತಿಲ್ಲ. ಆದ್ದರಿಂದ ಅವರು ಹೇಗೆ ಖರ್ಚನ್ನು ಹುಟ್ಟಿಸಿಕೊಳ್ಳಬೇಕು ಎಂದು ಸರ್ಕಾರದವರು ಯೋಚನೆ ಮಾಡಬೇಕು. ಜೊತೆಗೆ ಖಾಸಗಿ ಶಾಲೆಗಳನ್ನು ನಡೆಸತಕ್ಕವರು ಡೊನೇಷನ್ ತೆಗೆದುಕೊಳ್ಳಬೇಕು. ಈಗ ಸರ್ಕಾರದವರು ಒಂದು ಟ್ಯಾಕ್ಸೇಷನ್ ಪಾಲಿಸಿ ಇದೆಯೋ ಅದರಿಂದ ಪ್ರತಿಯೊಬ್ಬರು ಸಹ ಉಳಿಯತಕ್ಕ ಹಣವನ್ನು ಉಳಿಸಿಕೊಳ್ಳಬೇಕಾಗಿದೆ ಎನ್ನುವ ಕಾಲದಲ್ಲಿ ಡೊನೇಷನ್ ಸಿಗುವುದು ಬಹಳ ಕಷ್ಟ. ಹಳೇ ಕಾಲದಲ್ಲಿ ಕೆಲವೇ ಸ್ಕೂಲುಗಳಿದ್ದವು. ಈಗ ಬೀದಿ ಬೀದಿಗಳಲ್ಲೂ ಸ್ಕೂಲುಗಳು ಆಗಿರುವಾಗ ಡೊನೇಷನ್ ತೆಗೆದುಕೊಳ್ಳುವುದು ಬಹಳ ಕಷ್ಟ. ಆದ್ದರಿಂದ ಖಾಸಗಿ ವಿದ್ಯಾಶಾಲೆಗಳು ಸರಿಯಾಗಿ ನಡೆಯಬೇಕಾದರೆ ಯಾವ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಸರಿಯಾದ ಶಿಕ್ಷಣ ಬೇಕೆಂದು ಹೇಳುತ್ತಾರೋ ಅಂತಹ ತಂದೆ ತಾಯಿಗಳು ಅದರ ಭಾರವನ್ನು ಹೊರಬೇಕು. ಸರ್ಕಾರದವರು ಈಗ 60ಕೋಟಿ ರೂಪಾಯಿಗಳನ್ನು ಏನು ಖರ್ಚು ಮಾಡುತ್ತಿದ್ದಾರೆ, ಅವರಿಗೆ ಈ 2—3ಕೋಟಿ ರೂಪಾಯಿ ಭಾರವಲ್ಲ. ಅವರಿಗೆ ಆಗುವ ಖರ್ಚನ್ನು ಕೊಡಬೇಕು. ಖಾಸಗಿಯವರು ಶಾಲೆಗಳನ್ನು ನಡೆಸದೇ ಹೋದರೆ ಸರ್ಕಾರ ನಡೆಸಬೇಕಾಗುತ್ತದೆ. ಅದು ಸರ್ಕಾರದ ಜವಾಬ್ದಾರಿ ಇರುವುದರಿಂದ, ನಮಗೆ ಆಗತಕ್ಕ ಖರ್ಚನ್ನು ಕೊಡುತ್ತೇವೆ, ನೀವು ಶಾಲೆ ನಡೆಸಿ ಎಂದು ಹೇಳಬೇಕಾಗಿದೆ. ಅಥವಾ ಯಾರು ಯಾರ ತಂದೆತಾಯಿಗಳು ಸರಿಯಾದಂಥ ವಿದ್ಯಾಭ್ಯಾಸ ಬೇಕೆಂದು ಹೇಳುತ್ತಾರೋ, ಅಂಥವರು ಈ ಭಾರವನ್ನು ಹೊರಬೇಕು. ಇಂತಹ ಸಂಸ್ಥೆಗಳು ಸರಿಯಾದ ಲೆಕ್ಕ ಇಡಬೇಕಾದರೆ ಸರ್ಕಾರದ ಪ್ರಾತಿನಿಧ್ಯ ಇರಬೇಕು. ವಿದ್ಯಾಸಂಸ್ಥೆಗಳನ್ನು ಸರಿಯಾಗಿ ನಡೆಸಿಕೊಂಡು ಹೋಗಬೇಕಾದರೆ ಈ ಡೊನೇಷನ್ ತೆಗೆದುಕೊಳ್ಳಬೇಕು.

Sri A. R. BADARINARAYANA.—Admission to Schools or Colleges should not be a condition precedent to payment of donation.

ಶ್ರೀ ಟಿ. ಆರ್. ಶಾಮಣ್ಣ.—ಅಡ್ಮಿಷನ್‌ಗೂ ಡೊನೇಷನ್‌ಗೂ ಯಾವ ಲಗತ್ತು ಹಾಕಬಾರದು ಎನ್ನುವುದಕ್ಕೆ ನಾನು ಪೂರ್ಣ ಒಪ್ಪಿಗೆ ಕೊಡುತ್ತೇನೆ. ಶಾಲೆ ನಡೆಸಿಕೊಂಡು ಹೋಗುವುದಕ್ಕೆ ಆಗತಕ್ಕ ಖರ್ಚು ಸಾರ್ವಜನಿಕರಿಂದ ಬರದೆ ಇರುವ ಸಂದರ್ಭದಲ್ಲಿ ಸರ್ಕಾರ ಕೊಡಬೇಕು. ಇಲ್ಲದಿದ್ದರೆ, ಮಕ್ಕಳ ತಂದೆ ತಾಯಿಗಳು ಕೊಡಬೇಕು. ಕಾಲೇಜಿನಲ್ಲಿ ಡಬ್ಬಲ್ ಫೀಜ್ ಅಥವಾ ಒಂದೂವರೆಯಷ್ಟು ಫೀಜನ್ನು ತೆಗೆದುಕೊಳ್ಳುವ ಅವಕಾಶಮಾಡಿಕೊಟ್ಟಿದ್ದೀರಿ. ಯಾವುದಾದರೂ ಒಂದು ರೀತಿಯಲ್ಲಿ ಮಕ್ಕಳ ತಂದೆ ತಾಯಿಗಳಿಂದ ತೆಗೆದುಕೊಳ್ಳಬಹುದು, ಅಥವಾ ತೆಗೆದುಕೊಳ್ಳಬಾರದು ಎನ್ನುವುದಾದರೆ, ಸರ್ಕಾರದವರು ಪೂರ್ತಿ ಖರ್ಚು ಕೊಟ್ಟ ಪಕ್ಷದಲ್ಲಿ ಖಾಸಗಿಶಾಲೆಗಳು ನಡೆದುಕೊಂಡು ಹೋಗುತ್ತವೆ. ಎಲ್ಲಾ ಶಾಲೆಗಳನ್ನು ಸರ್ಕಾರ ತೆಗೆದುಕೊಂಡು ನಡೆಸಿದ ಪಕ್ಷದಲ್ಲಿ ಕೆಲವು ವಿದ್ಯಾರ್ಥಿಗಳು ಉತ್ತಮ ದರ್ಜೆಯಲ್ಲಿ ವಿದ್ಯಾಭ್ಯಾಸ ಮಾಡುವುದು ಹೋಗಿ ಶಾಲೆಗಳು ದೊಡ್ಡಿಯಾಗುತ್ತವೆ, ಎಂದು ಎಚ್ಚರಿಕೆ ಕೊಡುತ್ತೇನೆ. ಸರ್ಕಾರ ಎಲ್ಲಾ ಈ ಯೋಜನೆಗಳನ್ನು ಗಮನದಲ್ಲಿಟ್ಟುಕೊಂಡು ಸರಿಯಾದ ತೀರ್ಮಾನ ತೆಗೆದುಕೊಂಡು ಯಾವ ವಿದ್ಯಾಶಾಲೆಗಳು ವ್ಯಾಪಾರ ಸಂಸ್ಥೆಗಳು ಆಗಿವೆಯೋ ಅವಕ್ಕೆ ಮಟ್ಟಗೋಲು ಹಾಕಬೇಕು. ಇದರ ಬಗ್ಗೆ ಶಾಲೆ ನಡೆಸತಕ್ಕ ಪರಿಣಿತರನ್ನು ಮುಖ್ಯಸ್ಥರನ್ನು ಕರೆಸಿಕೊಂಡು ಚರ್ಚೆಮಾಡಿ, ಸಧ್ಯದಲ್ಲೇ ಒಂದು ತೀರ್ಮಾನ ತೆಗೆದುಕೊಳ್ಳುತ್ತೀರೆಂದು ತಿಳಿದುಕೊಂಡು ಆ ಮಾತನ್ನು ಅಲ್ಲಿಗೆ ಬಿಡುತ್ತೇನೆ. ಕಳೆದ 25 ವರ್ಷಗಳಿಂದ ನಮ್ಮ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಬರೀ ಪ್ರಯೋಗಗಳು ನಡೆಯುತ್ತಿವೆ. ವಿದ್ಯಾರ್ಥಿಗಳ ಮೇಲೂ ಮತ್ತು ಶಾಲೆಗಳ ಮೇಲೂ ಪ್ರಯೋಗ ನಡೆದು ಇದು ಎಲ್ಲಿಗೆ ನಿಲ್ಲುತ್ತದೋ ಗೊತ್ತಿಲ್ಲ. ಹಿಂದೆ ಇಂಜನಿಯರಿಂಗ್ ಕಾಲೇಜಿಗೆ ಅಡ್ಮಿಷನ್‌ಗೆ ಬೇಕಾದಷ್ಟು ಡೊನೇಷನ್ ಕೊಡುತ್ತಿದ್ದರು. ಈವೊತ್ತಿನ ದಿವಸ ಹೈದರಾಬಾದು ಎಜುಕೇಷನ್ ಸೊಸೈಟಿ ನಡೆಸತಕ್ಕ ಎಂಜನಿಯರಿಂಗ್ ಕಾಲೇಜಿಗೆ 25 ಅಪ್ಲಿಕೇಷನ್ಸ್ ಬಂದಿವೆ. ಎಂದು ಕೇಳಿದ್ದೇನೆ. ಬಿ.ಎಂ.ಎಸ್. ಕಾಲೇಜಿನಲ್ಲಿ ನೋಟೀಸ್ ಬೋರ್ಡಿನಲ್ಲಿ ಸಿವಿಲ್ ಇಂಜಿನಿಯರಿಂಗ್‌ಗೆ ನಾಲ್ಕು ಹೆಸರುಗಳನ್ನು ಹಾಕಿದ್ದಾರೆ. ಬೇರೆ ಸಬ್ಜೆಕ್ಟ್ಸ್‌ಗಳಿಗೆ 10—20 ಹೆಸರುಗಳನ್ನು ಹಾಕಿದ್ದಾರೆ. ಒಂದಾನೊಂದು ಕಾಲದಲ್ಲಿ 10,000 ರೂಪಾಯಿ ಡೊನೇಷನ್ ತೆಗೆದುಕೊಂಡು ಸೀಟು ಕೊಡುತ್ತಿದ್ದಂತಹ ಕಾಲೇಜುಗಳಲ್ಲಿ ಈವೊತ್ತಿನದಿವಸ ಎಲೆಕ್ಟ್ರಾನಿಕ್ಸ್ ಸೀಟನ್ನು 45 ನಂಬರ್ ಬಂದಿರುವವರಿಗೆ ಕೊಡುತ್ತೇವೆ ಎಂದು ಹೇಳಿದರೂ ಸೀಟುಗಳನ್ನು ಭರ್ತಿ ಮಾಡುವ ಅವಕಾಶವೂ ಕಾಣಲಿಲ್ಲ. ಒಂದಾನೊಂದು ಕಾಲದಲ್ಲಿ 10,000 ರೂಪಾಯಿ ಡೊನೇಷನ್ಸ್ ತೆಗೆದುಕೊಂಡು ಸೀಟುಗಳನ್ನು ಕೊಡತಕ್ಕ ಕಡೆ ಈಗ ಇಡೀ ಕಾಲೇಜಿಗೆ 25 ಅಡ್ಮಿಷನ್ ಬಂದಿರುವ ಬಗ್ಗೆ ವಿಚಾರ ಮಾಡಬೇಕಾಗಿದೆ. ಮೆಡಿಕಲ್ ಎಜುಕೇಷನ್ ಮತ್ತು ಫಿಸಿಕಲ್ ಎಜುಕೇಷನ್ ಸರಿಯಾದ ರೀತಿಯಲ್ಲಿ ನಡೆಯುವಂತೆ ನೋಡಿಕೊಳ್ಳಬೇಕು. ವಿದ್ಯಾಭ್ಯಾಸ ಜಾಬ್ ಓರಿಯಂಟೇಷನ್ ಆಗುವಂತೆ ನೋಡಬೇಕು. ನಾನು ಕೊಟ್ಟಿರುವ ಕಟ್ ಮೋಷನ್ ಗಮನಕ್ಕೆ ತೆಗೆದುಕೊಂಡು ಉತ್ತರ ಕೊಡುವುದರಿಂದ ಅದರ ಬಗ್ಗೆ ಹೆಚ್ಚು ಮಾತನಾಡುವ ಅವಶ್ಯಕತೆ ಕಾಣಲಿಲ್ಲ. ಕೊನೆಯದಾಗಿ, ಕಾಮರ್ಸ್ ಎಜುಕೇಷನ್ ಬಗ್ಗೆ ಸರ್ಕಾರದ ನಿರ್ಲಕ್ಷತೆ ಹೆಚ್ಚಾಗಿದೆ. 60 ಸಾವಿರ ವಿದ್ಯಾರ್ಥಿಗಳು ಈ ಕಾಮರ್ಸ್ ಶಾಲೆಗಳಲ್ಲಿ ಓದುತ್ತಿದ್ದಾರೆ. 60 ಕೋಟಿ ರೂಪಾಯಿ ಈ ವಿದ್ಯಾ ಇಲಾಖೆಗೆ ಖರ್ಚುಮಾಡುವಾಗ, 6 ಸಾವಿರ ಕೂಡ ಕಾಮರ್ಸ್ ಎಜುಕೇಶನ್‌ಗೆ ಖರ್ಚು ಮಾಡುತ್ತಾ ಇಲ್ಲ. ಅದರ ಖರ್ಚು ಎಕ್ಸಾಮಿನೇಷನ್ ಫೀಜ್‌ನಿಂದ ಆಗುತ್ತಾ ಇದೆ. ಎಲ್ಲಾ ಕಚೇರಿಗಳಿಗೂ, ಎಲ್ಲಾ ನ್ಯಾಯಾಲಯಗಳಿಗೂ ಬೇಕಾದಂಥ ಶಾರ್ಟ್‌ಹ್ಯಾಂಡ್ ಟೈಪಿಸ್ಟುಗಳನ್ನು ಮತ್ತು ಅಕೌಂಟೆಂಟುಗಳನ್ನು ತಯಾರು ಮಾಡುವ ಈ ವಿದ್ಯಾ ಸಂಸ್ಥೆಗಳಿಗೆ ಯಾವ ಸೌಲಭ್ಯ ಮತ್ತು ಅನುಕೂಲವನ್ನು ಮಾಡಿಕೊಡದೆ ಇರುವುದು ಶೋಚನೀಯ. ಕನ್ನಡ ಟೈಪ್‌ರೈಟಿಂಗ್ ಮತ್ತು ಕನ್ನಡ ಶಾರ್ಟ್ ಹ್ಯಾಂಡ್ ಬಗ್ಗೆ ಹೆಚ್ಚು ಅನುಕೂಲ ಮಾಡಿಕೊಡಬೇಕು ಎಂದು ಹೇಳಿ ಇಲ್ಲಿ ಕೊಟ್ಟಿರತಕ್ಕ 21 ಕಟ್ ಮೋಷನ್ಸ್ ಬಗ್ಗೆ ಗಮನ ಕೊಡುತ್ತಾರೆಂದು ನಂಬಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† Sri C. M. ARUMUGAM (K. G. F.).—Mr. Deputy Speaker, I am coming from Kolar Gold Fields Constituency in Kolar District. It is the biggest gold producing Centre in India and the deepest Mine in the world and this industry is there for over a period of 100 years. On account of this gold industry, Mysore generated power and on account of power generation for the purpose of the Gold Mine, Bangalore has

developed as an industrial City. K. G. F. is paying one-fourth of the total revenue of old Mysore State. But it is unfortunate K. G. F. which is contributing such a huge revenue for the last hundred years, was not provided with a Government High School. There are about 100 Schools in the Area spread over 30 sq. miles. There are 11 High Schools, 24 Middle Schools and 66 Primary Schools—in all 111 Schools. Very recently Government have taken over the Municipal Boys and Girls School. Municipal Girls' School is run in Musaffir Khana without rooms, without water tap and without other facilities and amenities for children.

There is also a Mining School in K.G.F. It is the only Mining School in the entire State. It is considered as a Departmental School of Mines. There is a Director for the School of Mining. I am not going into anything relating to the Director because his case is pending in the High Court or Supreme Court. This Mining School was constructed at a cost of Rs. 6 lakhs and its Hostel at a cost of Rs. 3 lakhs. Quarters also have been constructed at a cost of Rs. 2 lakhs. But the intake of the School is only half-a-dozen students. The total strength of the School is 40. Government is spending Rs. 1,64,000 every year on the School. Though it is the costliest institution in the whole world, it is the smallest Mining School. I do not know why they take only students in a year. The per capita expenditure on the Mining School is Rs. 10,000 per student as against Rs. 1,000 incurred in the various Engineering and Technical Education institutions in the State. The building potentiality of the School is such that this School can be converted into a Mining College because in the field of mining a geologist is always preferred to a student of the Mining School. For a Mining Degree one will have to go to Benaras University. Therefore the expenditure on the Mining School is a waste. If the institution should serve a useful purpose, it should be converted into a College.

